ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೩೦ನೇ ಡಿಸೆಂಬರ್ ೧೯೯೩, ಪುಷ್ಯ, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು

ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀ ಪಿ. ವೆಂಕಟಸುಬ್ಬಯ್ಯ ವಿಧಾನಸಭಾ ಸದಸ್ಯರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮ, ವಿಧಾನಪರಿಷತ್ತು ಸದಸ್ಯರಾದ ಶ್ರೀ ಎನ್. ಪಿ. ಕೃಷ್ಣಮೂರ್ತಿ, ಭಾರತರತ್ನ ಜೆ.ಆರ್.ಡಿ. ಟಾಟಾ, ಮಾಜಿ ವಿಧಾನಸಭಾ ಸದಸ್ಯರುಗಳಾದ ಶ್ರೀ ನಾಗೇಂದ್ರ ಒಮಣ್ಣ ಸಮಜಿ, ಶ್ರೀ ಟಿ.ಎಸ್. ಶಿವಣ್ಣ, ಕಾದಂಬರಿಕಾರರಾದ ಶ್ರೀ ಗೋವಿಂದಾಚಾರ್ಯ ಭೀಮಾಚಾರ್ಯ ಜೋಶಿ, ಚಲನಚಿತ್ರ ನಟರಾದ ಶ್ರೀ ಸುಂದರಕೃಷ್ಣ ಅರಸ್, ಸಂಗೀತ ನಿರ್ದೇಶಕರಾದ ಶ್ರೀ ಜಿ.ಕೆ. ವೆಂಕಟೇಶ್ ಶ್ರೇಷ್ಠ ಪತ್ರಕರ್ತರಾದ ಶ್ರೀ ಜಿ. ಬಸವರಾಜು ಮತ್ತು ಕೆ.ಎಸ್. ರಾಮಸ್ವಾಮಿ, 1993ನೇ ಸೆಪ್ಟೆಂಬರ್ 30ರಂದು ಮಹಾರಾಷ್ಟ್ರ ಮತ್ತು ಕರ್ನಾಟಕದ ಹಲವು ಜಿಲ್ಲೆಗಳಲ್ಲಿನ ಗ್ರಾಮಗಳಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದ 30 ಸಾವಿರಕ್ಕೂ ಹೆಚ್ಚು ಜನರು ಮೃತಪಟ್ಟಿರುವುದನ್ನು ಹಾಗೂ ಅಕ್ಟೋಬರ್ ತಿಂಗಳಿನಲ್ಲಿ ಸಂಭವಿಸಿದ ನೆರೆ ಹಾವಳಿಯಿಂದಾಗಿ ಕರ್ನಾಟಕ ರಾಜ್ಯದ ನಾನಾ ಕಡೆಗಳಲ್ಲಿ ಸಾವಿಗೀಡಾದವರ ಬಗ್ಗೆಯೂ ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀ ಪಿ. ವೆಂಕಟಸುಬ್ಬಯ್ಯನವರು ದಿನಾಂಕ : 12-10-1993 ರಂದು ಹೃದಯಾಘಾತದಿಂದ ನಿಧನರಾದರು.

ಶ್ರೀಯುತರು 1985ರಿಂದ 1988ರವರೆಗೆ ಬಿಹಾರ ರಾಜ್ಯದ ರಾಜ್ಯಪಾಲರಾಗಿ ಮತ್ತು 25-2-1988ರಿಂದ 5-2-1990 ಅವಧಿಯಲ್ಲಿ ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿರುತ್ತಾರೆ. ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀಯುತರು ಎರಡೂವರೆ ದಶಕಗಳ ಕಾಲ ಸಂಸತ್‌ನ್ನು ಪ್ರತಿನಿಧಿಸಿರುತ್ತಾರೆ. 1969 ರಿಂದ 1971ರವರೆಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮಹಾ ಕಾರ್ಯದರ್ಶಿಯಾಗಿ ಹಾಗೂ 1980ರಿಂದ 1984ರವರೆಗೆ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಕೇಂದ್ರ ಮಂತ್ರಿ ಮಂಡಲದಲ್ಲಿ ಗೃಹ ರಾಜ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ರಾಜಕೀಯ ಹಾಗೂ ಸಾಮಾಜಿಕವಾಗಿ ಅಪಾರ ಹೆಸರುಗಳಿಸಿದ ಗಣನೀಯ ವ್ಯಕ್ತಿಯಾಗಿದ್ದರು.

2. ವಿಧಾನಸಭೆಯ ಮಾಜಿ ಪ್ರಥಮ ಮಹಿಳಾ ಅಧ್ಯಕ್ಷರು, ಪ್ರತಿಪಕ್ಷದ ನಾಯಕಿ, ಮಾಜಿ ಮಂತ್ರಿಗಳು ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ರಾಜಕಾರಣಿ, ಹಾಲಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರು ದಿನಾಂಕ 17-10-1993 ರಂದು ನಿಧನರಾದರು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮೈಸೂರು ಜಿಲ್ಲೆಯ ಗುಂಡ್ಲುಪೇಟೆಯಿಂದ ಎರಡನೆ ಮೂರನೆ, ನಾಲ್ಕನೆ, ಐದನೆ, ಏಳನೆ, ಏಂಟನೆಯ ಹಾಗೂ ಒಂಭತ್ತನೆಯ

ವಿಧಾನಸಭೆಗೆ ಆಯ್ಕೆಯಾಗಿ ಕರ್ನಾಟಕ ರಾಜ್ಯದ ಏಳಿಗೆಗಾಗಿ ಅದರಲ್ಲೂ ವಿಶೇಷವಾಗಿ ಮೈಸೂರು ಜಿಲ್ಲೆಯ ಜನರ ಪ್ರೀತಿ ಆದರಗಳಿಗೆ ಪಾತ್ರರಾಗಿದ್ದ ಮಹಿಳೆಯಾಗಿದ್ದರು. 1972ರಿಂದ 1978ರವರೆಗೆ ಕರ್ನಾಟಕ ವಿಧಾನಸಭೆಯ ಪ್ರಥಮ ಮಹಿಳಾ ಅಧ್ಯಕ್ಷಣೆಯಾಗಿ ಹಾಗೂ ಪ್ರತಿಪಕ್ಷದ ನಾಯಕಿಯಾಗಿ ಸಹ ಕಾರ್ಯನಿರ್ವಹಿಸಿರುತ್ತಾರೆ. 1975ರಲ್ಲಿ ಜರ್ಮನಿಯಲ್ಲಿ ಜರುಗಿದ "ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನ"ದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿರುತ್ತಾರೆ.

1990 ರಿಂದ 1992ರವರೆಗೆ ಶ್ರೀ ಬಂಗಾರಪ್ಪನವರ ಮಂತ್ರಿಮಂಡಲದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಯೋಜನೆ ಹಾಗೂ ಸಾಂಖ್ಯಿಕ ಹಣಕಾಸು ಖಾತೆಯ ಸಂಪುಟ ದರ್ಜೆಯ ಸಚಿವೆಯಾಗಿ ಹಾಗೂ ಬೆಂಗಳೂರಿನಲ್ಲಿರುವ ಚಿತ್ರಕಲಾ ಪರಿಷತ್ತು ಸ್ಥಾಪಿಸಲು ಕಾರಣರು ಆದ ಶ್ರೀಮತಿಯವರು ಹಲವಾರು ವರ್ಷಗಳ ಕಾಲ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾಗಿಯೂ ಸಹ ಸ್ಮರಣೆಯ ಸೇವೆಸಲ್ಲಿಸಿರುತ್ತಾರೆ. ದಿವಂಗತರು ಅಂತರರಾಷ್ಟ್ರೀಯ ಕಲಾ ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ಮಹಿಳೆಯರ ಹಾಗೂ ಶೋಷಿತ ವರ್ಗದವರ ಕಲ್ಯಾಣಕ್ಕಾಗಿ ಶ್ರಮಿಸಿರುತ್ತಾರೆ.

3. ರಾಜ್ಯ ವಿಧಾನಪರಿಷತ್ತಿನ ಸದಸ್ಯರಾಗಿದ್ದ ಶ್ರೀ ಎನ್.ಪಿ. ಕೃಷ್ಣಮೂರ್ತಿಯವರು ದಿನಾಂಕ 7-10-1993 ರಂದು ನಿಧನರಾದರು.

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನವರಾದ ಶ್ರೀ ಎನ್.ಪಿ. ಕೃಷ್ಣಮೂರ್ತಿಯವರು ಮೂಲತಃ ಕಾಫಿ ಬೆಳೆಗಾರರಾಗಿದ್ದು 1988ರಿಂದ 1994ರ ಅವಧಿಯವರೆಗೆ ಹಾಸನದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯಾಗಿ ವಿಧಾನಪರಿಷತ್ತಿಗೆ ಆಯ್ಕೆಯಾಗಿ ಉತ್ತಮ ಸೇವೆ ಸಲ್ಲಿಸಿರುತ್ತಾರೆ.

4. "ಭಾರತ ರತ್ನ" ಜಹಾಂಗೀರ್ ರತನ್‌ಜಿ ದಾದಾಭಾಯಿ ಟಾಟಾರವರು 29ನೇ ನವೆಂಬರ್ 1993 ರಂದು ಜಿನೀವಾದಲ್ಲಿ ನಿಧನರಾದರು.

ಭಾರತದ ಹೋಟೇಲ್ ಉದ್ಯಮ, ವಿಮಾನಯಾನ ಮತ್ತು ಉಕ್ಕು ಉದ್ಯಮದ ಮೂಲ ಕಾರಣಕರ್ತರಾಗಿದ್ದ ದಿವಂಗತರು, ಭಾರತೀಯ ಉದ್ಯಮದ ದಿಗ್ಗಜರಲ್ಲಿ ಮೊದಲಿಗರು. 1992ರ ಜನವರಿ 28ರಂದು ಭಾರತ ಸರ್ಕಾರವು ಅವರಿಗೆ "ಭಾರತ ರತ್ನ" ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1904ರಲ್ಲಿ ಪ್ಯಾರಿಸ್‌ನಲ್ಲಿ ಜನಿಸಿದ ಜೆ.ಆರ್.ಡಿ. ಟಾಟಾ ಅವರು ಮುಂಬಯಿನ ಕ್ಯಾಥಡ್ರಿಲ್ ಶಾಲೆಯಲ್ಲಿ ಶಿಕ್ಷಣವನ್ನು ಪಡೆದಿದ್ದರು. ನಂತರ ಅವರು ಫ್ರೆಂಚ್‌ನ ಸೇನೆಗೆ ಸೇರಿ, ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ದಿವಂಗತರಿಗೆ ಚಿಕ್ಕಂದಿನಿಂದಲೂ ವಿಮಾನಗಳೆಂದರೆ ಪ್ರೀತಿ ಈ ಪ್ರೇರಕ ಶಕ್ತಿಯಿಂದಾಗಿಯೇ ಅವರು ಟಾಟಾ ಏರ್‌ಲೈನ್ಸ್‌ನಲ್ಲಿ ಚಾಲಕರಾಗಿ ನಂತರ ಏರ್ ಇಂಡಿಯಾದ ಅಧ್ಯಕ್ಷರಾಗಿ ಬಹಳಷ್ಟು ಕಾಲ ಸೇವೆಸಲ್ಲಿಸಿದ್ದರು.

ಸೈನಿಕ, ವೈಮಾನಿಕ, ಉದ್ಯಮಿ ಹೀಗೆ ವೈವಿಧ್ಯಮಯವಾದ ಬದುಕು ದಿವಂಗತರದ್ದಾಗಿತ್ತು.

5. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ನಾಗೇಂದ್ರ ಒಮಣ್ಣ ಸಮಜಿಜಯವರು ದಿನಾಂಕ 21-9-1993 ರಂದು ನಿಧನರಾದರು.

ಶ್ರೀಯುತರು 1955ರಲ್ಲಿ ಮುಂಬಯಿ ವಿಧಾನಸಭೆಗೆ ಆಯ್ಕೆಯಾಗಿ, 1956ರ ರವರೆಗೆ ಸೇವೆ ಸಲ್ಲಿಸಿದ್ದರು. ರಾಜ್ಯವು ಪುನರ್ ಸಂಘಟನೆಯಾದ ನಂತರ ಮೈಸೂರು ವಿಧಾನ ಸಭೆಗೆ ಬೆಳಗಾಂ ಜಿಲ್ಲೆಯ ಬಾಗೆವಾಡಿ ಕ್ಷೇತ್ರದಿಂದ 2ನೇ ಹಾಗೂ 3ನೇ

ವಿಧಾನಸಭೆಗೆ ಆಯ್ಕೆಯಾಗಿದ್ದರು. ದಿವಂಗತರು ಬೆಳಗಾಂ ಜಿಲ್ಲೆಯ ರೈತರ ಮತ್ತು ಕಾರ್ಮಿಕ ಪಂಗಡದ ಮಹಾಕಾರ್ಯದರ್ಶಿಯಾಗಿ ಗಣನಿಯ ಸೇವೆ ಸಲ್ಲಿಸಿರುತ್ತಾರೆ.

6. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಟಿ.ಎಸ್. ಶಿವಣ್ಣನವರು ದಿನಾಂಕ 6-12-1993ರಂದು ನಿಧನರಾದರು.

ದಿವಂಗತರು ತುಮಕೂರು ಜಿಲ್ಲೆಯ ಕೊರಟಗೆರೆ ಕ್ಷೇತ್ರದಿಂದ ಮೂರು ಮತ್ತು ನಾಲ್ಕನೆ ವಿಧಾನಸಭೆಯ ಸದಸ್ಯರಾಗಿದ್ದರು. ಸುಮಾರು 8 ವರ್ಷಗಳ ಕಾಲ ಮಧುಗಿರಿ ಮುನಿಸಿಪಾಲಿಟಿಯ ಅಧ್ಯಕ್ಷರಾಗಿ ಅವಿಸ್ಮರಣೀಯ ಸೇವೆ ಸಲ್ಲಿಸಿರುತ್ತಾರೆ. ರೈತ ಕುಟುಂಬದಿಂದ ಬಂದ ದಿವಂಗತರು ಹಿಂದುಳಿದ ಅದರಲ್ಲೂ ಹರಿಜನ ಗಿರಿಜನ ಪುರೋಭಿವೃದ್ಧಿಗಾಗಿ ಶ್ರಮಿಸಿದ್ದರು.

7. ಪದ್ಮಶ್ರೀ, ಕೇಂದ್ರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು, ಖ್ಯಾತ ನಾಟಕಕಾರರು ಮತ್ತು ಕಾದಂಬರಿಕಾರರು ಆಗಿದ್ದ ಶ್ರೀ ಗೋವಿಂದಚಾರ್ಯ ಭೀಮಾಚಾರ್ಯ ಜೋಷಿ ಅವರು ದಿನಾಂಕ 26-12-1993ರಂದು ನಿಧನರಾದರು.

1904ರ ಜುಲೈ 29ರಂದು ಹುಟ್ಟಿದ ಇವರು ಬೇಂದ್ರೆ ಅವರು ಕಟ್ಟಿದ ಗೆಳೆಯರ ಗುಂಪಿನಲ್ಲಿದ್ದರು. "ಜಡಭರತನ ಕನಸುಗಳು" ಎಂಬ ಕಾದಂಬರಿಯಿಂದಾಗಿ ಸಾಹಿತ್ಯ ಲೋಕದಲ್ಲಿ ಜಡಭರತ ಎಂದು ಹೆಸರುವಾಸಿಯಾಗಿದ್ದರು. 1986ರಲ್ಲಿ ಪದ್ಮಶ್ರೀ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳು ಹಾಗೂ 1989ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಗಳನ್ನು ಪಡೆದಿದ್ದರು. ಜಡಭರತನ ನಿಧನದಿಂದಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವುಂಟಾಗಿದೆ.

8. ಪ್ರಸಿದ್ಧ ಪ್ರತಿಭಾನ್ವಿತ ಕನ್ನಡ ಚಿತ್ರನಟ, ನಿರ್ದೇಶಕ ಶ್ರೀ ಸುಂದರಕೃಷ್ಣ ಅರಸ್ ಅವರು ದಿನಾಂಕ 8-11-1993ರಂದು ನಿಧನರಾದರು.

ಕಂಚಿನಕಂಠ, ಉತ್ತಮ ನಟನೆ ಹಾಗೂ ನಿರ್ದೇಶನ ಮೂಲಕ ಕನ್ನಡ ಚಿತ್ರರಂಗದಲ್ಲಿ ವಿಶೇಷ ಸ್ಥಾನ ಪಡೆದ ಶ್ರೀ ಸುಂದರಕೃಷ್ಣ ಅರಸ್ ಅವರ ನಿಧನದಿಂದ ಕನ್ನಡ ಚಿತ್ರರಂಗಕ್ಕೆ ತುಂಬಲಾರದ ನಷ್ಟವುಂಟಾಗಿದೆ.

9. ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಶ್ರೀ ಜಿ.ಕೆ. ವೆಂಕಟೇಶ್ ಅವರು ಮಂಗಳವಾರ, ದಿನಾಂಕ 16ನೇ ನವೆಂಬರ್ 1993 ರಂದು ಮದ್ರಾಸ್‌ನಲ್ಲಿ ನಿಧನರಾದರು.

ಸುಮಾರು 120ಕ್ಕೂ ಹೆಚ್ಚು ಚಲನಚಿತ್ರಗಳಿಗೆ ಸಂಗೀತ ನೀಡಿದ್ದು ಅವರ ಜನಪ್ರಿಯ ಹಾಡುಗಳು ಅವರ ಅಭಿಜಾತ ಪ್ರತಿಭೆಗೆ ಸಾಕ್ಷಿಯಾಗಿವೆ. ಸಂಗೀತ ನಿರ್ದೇಶಕನ ಜೊತೆಗೆ ಚಲನಚಿತ್ರ ನಿರ್ಮಾಪಕರು ಮತ್ತು ಗಾಯಕರು ಕೂಡ ಆಗಿದ್ದರು. ಭಕ್ತ ಕುಂಬಾರ ಚಲನಚಿತ್ರಕ್ಕೆ ನೀಡಿದ ಸಂಗೀತಕ್ಕಾಗಿ ಅವರಿಗೆ ರಾಜ್ಯಪ್ರಶಸ್ತಿ ದೊರೆತಿತ್ತು. ಅವರನ್ನು ಸಂಗೀತ್ ಸಾಮ್ರಾಟ್ ಎಂದು ಕೂಡ ಕರೆಯಲಾಗಿತ್ತು. ಇವರ ನಿಧನದಿಂದ ದಕ್ಷಿಣ ಭಾರತದ ಚಲನಚಿತ್ರರಂಗಕ್ಕೆ ತುಂಬಲಾರದ ನಷ್ಟವುಂಟಾಗಿದೆ.

10. ಭಾರತ ಸರ್ಕಾರದ ವಾರ್ತಾ ಸೇವೆಯ ನಿವೃತ ಅಧಿಕಾರಿ ಹಾಗೂ ಶ್ರೇಷ್ಠ ಬರಹಗಾರರು ಆದ ಶ್ರೀ ಬಸವರಾಜು ಅವರು ಭಾನುವಾರ, ದಿನಾಂಕ 12ನೇ ಡಿಸೆಂಬರ್ 1993ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

ಪ್ರದೇಶ ಭಾಷಾ ಸಮಾಚಾರ ಎಂಬ ಕನ್ನಡ ಸುದ್ದಿ ಸಂಸ್ಥೆಯ ಸಂಪಾದಕರಾಗಿ ಕೂಡ ಸೇವೆ ಸಲ್ಲಿಸಿರುತ್ತಾರೆ. ಇವರ ನಿಧನದಿಂದ ಸುದ್ದಿ ಸಂಪಾದಕ ಲೋಕಕ್ಕೆ ತುಂಬಲಾರದ ನಷ್ಟವುಂಟಾಗಿದೆ.

11. ಅನುಭವಿ ಪತ್ರಕರ್ತರಾದ ಶ್ರೀ ಕೆ.ಎಸ್. ರಾಮಸ್ವಾಮಿ ಅವರು 13ನೇ ಡಿಸೆಂಬರ್ 1993ರಂದು ನಿಧನರಾದರು.

ಹಿಂದು ಪತ್ರಿಕೆಯ ಸಂಪಾದಕೀಯ ಪ್ರತಿನಿಧಿಯಾಗಿ ಬಹಳಷ್ಟು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಪತ್ರಕರ್ತರ ಸಂಘದ ಪದಾಧಿಕಾರಿಯಾಗಿ ಸಹ ಕೆಲವು ವರ್ಷಗಳ ಕಾಲ ಸ್ಮರಣೀಯ ಸೇವೆ ಸಲ್ಲಿಸಿದ್ದರು. ಶ್ರೀಯುತರುಗಳಿಗೆ ಕರ್ನಾಟಕ ಸರ್ಕಾರವು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ನಿಧನ ಪತ್ರಿಕಾರಂಗಕ್ಕೆ ತುಂಬಲಾರದ ಹಾನಿಯನ್ನುಂಟು ಮಾಡಿದೆ.

12. 1993 ರ ಸೆಪ್ಟೆಂಬರ್ 30ರಂದು ಮಹಾರಾಷ್ಟ್ರದ ಪಶ್ಚಿಮ ಜಿಲ್ಲೆಗಳಲ್ಲಿನ ಹಲವಾರು ಗ್ರಾಮಗಳಲ್ಲಿ ಹಾಗೂ ಕರ್ನಾಟಕದ ಬಿಜಾಪುರ, ಬೀದರ್ ರಾಯಚೂರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಭೀಕರ ಭೂಕಂಪ ಸಂಭವಿಸಿತು.

ಉಗ್ರ ಸ್ವರೂಪದಾದ ಈ ಭೂಕಂಪದಿಂದ 65ಕ್ಕೂ ಹೆಚ್ಚು ಹಳ್ಳಿಗಳು ಭೂಗತವಾದವು. ಸಹಸ್ರಾರು ಮನೆಗಳು ಕಟ್ಟಡಗಳು ಧ್ವಂಸವಾದವು.ಪತ್ತೆಯಾಗದಷ್ಟು ನಾಗರೀಕರು ನೆಲಸಮವಾದರು. ಮೂವತ್ತು ಸಾವಿರಕ್ಕೂ ಹೆಚ್ಚು ಮಂದಿ ಕಲ್ಲು ಮಣ್ಣುಗಳ ರಾಶಿ ರಾಶಿಗಳಡಿ ಸಿಕ್ಕಿ ಮೃತಪಟ್ಟರು. ಸಾವಿರಾರು ಜನರು ಅಂಗವಿಕಲರಾದರು.

ಸತ್ತವರ ಕುಟುಂಬಗಳ, ಸಂಬಂಧಿಗಳ ದಾರುಣ ರೋದನ, ಗಾಯಾಳುಗಳ ನರಳಾಟ, ವೇದನೆ ಆಸ್ತಿ ಪಾಸ್ತಿಯನ್ನು ಕಳೆದುಕೊಂಡವರ ದುಃಖ ದುಮ್ಮಾನಗಳನ್ನು ಬಾಯಲ್ಲಿ ಅಥವಾ ಪದಗಳಲ್ಲಿ ವ್ಯಕ್ತಪಡಿಸಲಸಾಧ್ಯ. ಭವಿಷ್ಯದಲ್ಲಿ ಇಂತಹ ವಿಪತ್ತು ಮರುಕಳಿಸದಿರಲಿ ಎಂದು ಹಾರೈಸುತ್ತಾ ಮೃತರ ಕುಟುಂಬ ವರ್ಗದವರೆಲ್ಲರಿಗೂ ನಮ್ಮೆಲ್ಲರ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

13. ಅಕ್ಟೋಬರ್‌ನಲ್ಲಿ ಕರ್ನಾಟಕ ರಾಜ್ಯದ ರಾಯಚೂರು, ಬಿಜಾಪುರ ಗುಲ್ಬರ್ಗಾ ಬಳ್ಳಾರಿ ಹಾಗೂ ಧಾರವಾಡ ಜಿಲ್ಲೆಯ ನಾನಾ ಕಡೆಗಳಲ್ಲಿ ಅತಿವೃಷ್ಟಿಯಿಂದಾಗಿ ತುಂಬು ಪ್ರವಾಹದಿಂದ ಹಲವಾರು ಜನರು ಮರಣ ಹೊಂದಿದರು ಹಾಗೂ ನೂರಾರು ಊರುಗಳ ಜಲವೃತವಾಗಿ ಸಾವಿರಾರು ಮನೆಗಳಿಗೆ ನೀರು ನುಗ್ಗಿ ನಿರಾಶ್ರಿತರಾದವರಿಗೆ ನಮ್ಮೆಲ್ಲರ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

+ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಕಳೆದ ವಿಧಾನಸಭೆಯ ನಂತರ ಇವತ್ತು ಸೇರುವ ಮಧ್ಯೆ ಪ್ರಕೃತಿ ವಿಕೋಪದಿಂದ, ಭೂಕಂಪದಿಂದ ನಮ್ಮ ಕರ್ನಾಟಕದಲ್ಲಿ ಮತ್ತು ಬಹಳ ಹೆಚ್ಚಾಗಿ ಅಂದರೆ ಸಾವಿರಾರು ಜನ ಮಹಾರಾಷ್ಟ್ರದಲ್ಲಿ ಮರಣಕ್ಕೊಳಗಾದರು. ಆಸ್ತಿಪಾಸ್ತಿ ಕಳೆದುಕೊಂಡಿದ್ದಾರೆ. ಹಾಗೂ ಅನೇಕ ಜನರು ಅಂಗವಿಕಲರಾದರು. ಬಹುಶಃ ನಮ್ಮ ದೇಶದಲ್ಲಿ ಶತಮಾನದ ಒಂದು ಅತ್ಯಂತ ದೊಡ್ಡ ದುರಂತದಲ್ಲಿ ಸಂಕಟಪಡಬೇಕಾದ ವಿಚಾರ ಬಂದು ತಾವು ಅವರ ಬಗ್ಗೆ ಏನು ಸಂತಾಪವನ್ನು, ಶ್ರದ್ಧಾಂಜಲಿಯನ್ನು ಇವತ್ತು ಮಂಡಿಸಿದ್ದೀರಿ, ಅದಕ್ಕೆ ನಾನೂ ಕೂಡ ಧ್ವನಿಗೂಡಿಸುತ್ತೇನೆ. ಈ ದುರಂತಕ್ಕೆ ತುತ್ತಾದವರ ಬಗ್ಗೆ ರಾಷ್ಟ್ರದ ಜನ ಹಾಗೂ ವಿಶ್ವದ ಅನೇಕ ರಾಷ್ಟ್ರಗಳಿಂದ ಉದಾರವಾದ ಸಹಾಯವನ್ನು ಕೂಡಾ ನೀಡಿದ್ದಾರೆ. ಈ ಘಟನೆಯ ಬಗ್ಗೆ ಮಾನವೀಯತೆಯ ಒಂದು ಮಹಾಪೂರವೇ ಹರಿದಿದ್ದು, ಭೂಕಂಪದ ಸಂತ್ರಸ್ಥರ ಬಗ್ಗೆ, ಮಡಿದವರ ಬಗ್ಗೆ ಅಗಾಧ ಪ್ರಮಾಣದಲ್ಲಿ ಬಂದ ಶ್ರದ್ಧಾಂಜಲಿಯನ್ನು ನಾವು ಕಂಡಿದ್ದೇವೆ.

ಇನ್ನು ನಾವು ಇವತ್ತು ಈ ಸದನದಲ್ಲಿ ಸೇರುವಾಗ ಅತ್ಯಂತ ಕ್ರಿಯಾಶೀಲ, ಪ್ರಾಮಾಣಿಕ, ಶ್ರದ್ಧಾವಂತೆ, ಹಿರಿಯ ರಾಜಕಾರಣಿ, ಅತ್ಯಂತ ಶ್ರೇಷ್ಠ ಅನುಭವದ ಸಂಸದೀಯಪಟುವಾಗಿದ್ದಂತ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರನ್ನು ನಾವು

ಸಮಾಲೋಚನೆಯನ್ನು ಕೂಡ ಮಾಡಿದ್ದರು. ಅಂತಹ ಒಬ್ಬ ಪ್ರಾಂಜ್ವಲ ವ್ಯಕ್ತಿತ್ವ, ಶ್ರೇಷ್ಠ ಅದ್ವಿತೀಯ ಆದರ್ಶವನ್ನು ಹೊಂದಿದಂತಹ ಉದ್ಯಮಿಯನ್ನು ಭಾರತದ ದೊಡ್ಡ ಮಹಾನ್ ಪುತ್ರನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರಿಗೂ ಕೂಡ ನಾನು ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಿದ್ದೇನೆ.

ಇನ್ನು ಮಾನ್ಯ ಎನ್. ಪಿ. ಕೃಷ್ಣಮೂರ್ತಿಯವರು ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ತಮ್ಮ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸದನದಲ್ಲಿ ಅವರು ಬಹಳ ಕ್ರಿಯಾಶೀಲತೆಯಿಂದ ಕೆಲಸ ಮಾಡುತ್ತಿದ್ದರು. ಯಾವಾಗಲೂ ಕೂಡ ದಿನಕ್ಕೆ ಒಮ್ಮೆಯಾದರೂ ಸಹ ತಮ್ಮ ಕ್ಷೇತ್ರದ ಬಗ್ಗೆ, ಹಾಸನ ಜಿಲ್ಲೆಯ ಬಗ್ಗೆ ಏನಾದರೂ ಕೆಲಸ ನನ್ನ ಬಳಿ ತರದೆ, ಬೇಟಿಯಾಗದೆ ಇರುತ್ತಿರಲಿಲ್ಲ. ಅಂತಹ ಒಬ್ಬ ಕ್ರಿಯಾಶೀಲ ಸದಸ್ಯರನ್ನು ಆ ಮನೆಯಿಂದ ನಾವು ಕಳೆದುಕೊಂಡಿದ್ದೇನೆ.

ಇನ್ನು, ಸನ್ಮಾನ್ಯ ನಾಗೇಂದ್ರ ಒಮಣ್ಣ ಸಮಜಿ ಮತ್ತು ಟಿ.ಎನ್. ಶಿವಣ್ಣ ಅವರುಗಳನ್ನೂ ಕೂಡ ಕಳೆದುಕೊಂಡು ನಾವು ಇವತ್ತು ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕಂಥ ಸಂದರ್ಭದಲ್ಲಿ ತಮ್ಮ ಜೊತೆಯಲ್ಲಿ ನಾನೂ ಸಹ ಧ್ವನಿಗೂಡಿಸುತ್ತೇನೆ. ಅನೇಕ ಪ್ರತಿಭಾವಂತರು ಈ ದೇಶದ ಹಾಗೂ ನಾಡಿ ಬೆಳವಣಿಗೆ ಬಗ್ಗೆ ತಮ್ಮದೇ ಆದ ವ್ಯಕ್ತಿತ್ವದಿಂದಾಗಿ ವಿಶೇಷವಾದ ಪ್ರಭಾವವನ್ನು ಬೀರಿರುವಂಥ ಈ ವ್ಯಕ್ತಿಗಳಿಗೆ ಈ ಸದನದ ಪರವಾಗಿ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ನಾನು ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯ ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿ ಆದ ನಿಸರ್ಗ ವಿಕೋಪದಿಂದ ಭೂಕಂಪ ಮತ್ತು ನೆರೆಹಾವಳಿಯಿಂದ ಸಾವಿರಾರು ಜನ ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಆ ದೃಶ್ಯವನ್ನು ನೋಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಾನು ಮಹಾರಾಷ್ಟ್ರದ ಗಡಿಪ್ರದೇಶದಲ್ಲಿ, ನಮ್ಮ ರಾಜ್ಯದ ಇಂಡಿ ತಾಲ್ಲೂಕಿನಲ್ಲಿ ನಡೆದ ದೃಶ್ಯವನ್ನು ಸ್ವತಃ ನೋಡಿಕೊಂಡು ಬಂದಿದ್ದೇನೆ. ಅದನ್ನು ನೋಡಿದರೆ ಅಂತಹ ಒಂದು ಸಂಕಷ್ಟ ಯಾರ ಮೇಲೂ ಬರಬಾರದು ಎಂದು ಹೇಳಬೇಕಾಗುತ್ತದೆ. ನನಗನ್ನಿಸುತ್ತದೆ, ಈ ಶತಮಾನದಲ್ಲೇ ಇಂತಹ ಒಂದು ಪ್ರಸಂಗ ವಿಶ್ವದಲ್ಲೇ ಹಿಂದೆ ಆಗಿರಲಿಲ್ಲ. ಅಷ್ಟು ಜನರ ಪ್ರಾಣಹಾನಿಯಾಗಿದೆ, ಸಾಕಷ್ಟು ಆಸ್ತಿಪಾಸ್ತಿ ಹಾನಿಯಾಗಿದೆ. ಇವರೆಲ್ಲರಿಗೂ ಶ್ರದ್ಧಾಂಜಲಿಯನ್ನು, ಸಂತಾಪವನ್ನು ವ್ಯಕ್ತ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ನಾನು ಭಾವಿಸುತ್ತೇನೆ. ಅದೇ ಪ್ರಕಾರ ಶ್ರೀಮತಿ ನಾಗರತ್ನಮ್ಮನವರು ಅವರ ಬಗ್ಗೆ ನಾವು ಎಷ್ಟು ಮಾತನಾಡಿದರೂ ಕಡಿಮೆಯೇ. ಅವರು ಒಬ್ಬ ಆದರ್ಶನೀಯ ವ್ಯಕ್ತಿಯಾಗಿ, ಈ ಸದನದಲ್ಲಿ ಮಂತ್ರಿಯಾಗಿ ವಿರೋಧಪಕ್ಷದ ನಾಯಕಿಯಾಗಿ, ಇಡೀ ಭಾರತ ದೇಶದಲ್ಲೇ ಮೊದಲನೇ ಮಹಿಳಾ ಅಧ್ಯಕ್ಷೆಯಾಗಿ ಅವರು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ. ಅವರ ನಿಧನದಿಂದಾಗಿ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಅಷ್ಟೇ ಅಲ್ಲ, ಇಡೀ ರಾಜ್ಯಕ್ಕೇ ಹಾನಿಯಾಗಿದೆ. ಏಕೆಂದರೆ ಅವರು ಅಂತಹ ಒಬ್ಬ ಆದರ್ಶನೀಯ ವ್ಯಕ್ತಿಯಾಗಿದ್ದರು. ಇವತ್ತು ಅವರನ್ನು ನಾವು ಕಳೆದುಕೊಂಡಿದ್ದೇವೆ. ಅದೇ ಪ್ರಕಾರ ರಾಜ್ಯದ ಮಾಜಿ ರಾಜ್ಯಪಾಲರೂ ಆದ ಶ್ರೀ ಪಿ. ವೆಂಕಟ್ಟಸುಬ್ಬಯ್ಯ ಸಹ ಈ ರಾಜ್ಯದ ರಾಜ್ಯಪಾಲರಾಗಿ ಸೇವೆ ಮಾಡಿದ್ದಾರೆ. ಅವರು ಸಹ ಇವತ್ತು ನಮ್ಮಲ್ಲಿ ಇಲ್ಲ. ಮತ್ತೊಬ್ಬರು ಭಾರತರತ್ನ ರಾಷ್ಟ್ರದ ಸುಪುತ್ರರಾದಂಥ ಶ್ರೀ ಜೆ.ಆರ್.ಡಿ. ಟಾಟಾ ಅವರನ್ನು ನಾವು ಯಾವ ಶಬ್ದದಿಂದ ವರ್ಣಿಸಬೇಕೆಂದು ಗೊತ್ತಾಗುವುದಿಲ್ಲ. ಏಕೆಂದರೆ ಅಪಾರವಾದ ಸೇವೆಯನ್ನು ಕೈಗಾರಿಕಾ ಕ್ಷೇತ್ರದಲ್ಲಿ, ಈ ದೇಶದಲ್ಲಿ ಅವರು ಮಾಡಿದ್ದಾರೆ. ಈ ದೇಶದಲ್ಲಿ ಏನು ಕೈಗಾರಿಕಾ ಬೆಳವಣಿಗೆಯಾಗಿದೆ, ಅದರ ಬಹಳಷ್ಟು ಶ್ರೇಯಸ್ಸು ಅವರಿಗೆ ಹೋಗಬೇಕಾಗಿದೆ. ಅವರು ನಮ್ಮ ರಾಷ್ಟ್ರದ ಸುಪುತ್ರರು. ಅವರನ್ನು

ಸಮಾಲೋಚನೆಯನ್ನು ಕೂಡ ಮಾಡಿದ್ದರು. ಅಂತಹ ಒಬ್ಬ ಪ್ರಾಂಜ್ವಲ ವ್ಯಕ್ತಿತ್ವ, ಶ್ರೇಷ್ಠ ಅದ್ವಿತೀಯ ಆದರ್ಶವನ್ನು ಹೊಂದಿದಂತಹ ಉದ್ಯಮಿಯನ್ನು ಭಾರತದ ದೊಡ್ಡ ಮಹಾನ್ ಪುತ್ರನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರಿಗೂ ಕೂಡ ನಾನು ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಿದ್ದೇನೆ.

ಇನ್ನು ಮಾನ್ಯ ಎನ್. ಪಿ. ಕೃಷ್ಣಮೂರ್ತಿಯವರು ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ತಮ್ಮ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸದನದಲ್ಲಿ ಅವರು ಬಹಳ ಕ್ರಿಯಾಶೀಲತೆಯಿಂದ ಕೆಲಸ ಮಾಡುತ್ತಿದ್ದರು. ಯಾವಾಗಲೂ ಕೂಡ ದಿನಕ್ಕೆ ಒಮ್ಮೆಯಾದರೂ ಸಹ ತಮ್ಮ ಕ್ಷೇತ್ರದ ಬಗ್ಗೆ, ಹಾಸನ ಜಿಲ್ಲೆಯ ಬಗ್ಗೆ ಏನಾದರೂ ಕೆಲಸ ನನ್ನ ಬಳಿ ತರದೆ, ಬೇಟಿಯಾಗದೆ ಇರುತ್ತಿರಲಿಲ್ಲ. ಅಂತಹ ಒಬ್ಬ ಕ್ರಿಯಾಶೀಲ ಸದಸ್ಯರನ್ನು ಆ ಮನೆಯಿಂದ ನಾವು ಕಳೆದುಕೊಂಡಿದ್ದೇನೆ.

ಇನ್ನು, ಸನ್ಮಾನ್ಯ ನಾಗೇಂದ್ರ ಒಮಣ್ಣ ಸಮಜಿ ಮತ್ತು ಟಿ.ಎನ್. ಶಿವಣ್ಣ ಅವರುಗಳನ್ನೂ ಕೂಡ ಕಳೆದುಕೊಂಡು ನಾವು ಇವತ್ತು ಶ್ರದ್ಧಾಂಜಲಿಯನ್ನು ಅರ್ಪಿಸತಕ್ಕಂಥ ಸಂದರ್ಭದಲ್ಲಿ ತಮ್ಮ ಜೊತೆಯಲ್ಲಿ ನಾನೂ ಸಹ ಧ್ವನಿಗೂಡಿಸುತ್ತೇನೆ. ಅನೇಕ ಪ್ರತಿಭಾವಂತರು ಈ ದೇಶದ ಹಾಗೂ ನಾಡಿ ಬೆಳವಣಿಗೆ ಬಗ್ಗೆ ತಮ್ಮದೇ ಆದ ವ್ಯಕ್ತಿತ್ವದಿಂದಾಗಿ ವಿಶೇಷವಾದ ಪ್ರಭಾವವನ್ನು ಬೀರಿರುವಂಥ ಈ ವ್ಯಕ್ತಿಗಳಿಗೆ ಈ ಸದನದ ಪರವಾಗಿ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ನಾನು ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯ ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿ ಆದ ನಿಸರ್ಗ ವಿಕೋಪದಿಂದ ಭೂಕಂಪ ಮತ್ತು ನೆರೆಹಾವಳಿಯಿಂದ ಸಾವಿರಾರು ಜನ ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಆ ದೃಶ್ಯವನ್ನು ನೋಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಾನು ಮಹಾರಾಷ್ಟ್ರದ ಗಡಿಪ್ರದೇಶದಲ್ಲಿ, ನಮ್ಮ ರಾಜ್ಯದ ಇಂಡಿ ತಾಲ್ಲೂಕಿನಲ್ಲಿ ನಡೆದ ದೃಶ್ಯವನ್ನು ಸ್ವತಃ ನೋಡಿಕೊಂಡು ಬಂದಿದ್ದೇನೆ. ಅದನ್ನು ನೋಡಿದರೆ ಅಂತಹ ಒಂದು ಸಂಕಷ್ಟ ಯಾರ ಮೇಲೂ ಬರಬಾರದು ಎಂದು ಹೇಳಬೇಕಾಗುತ್ತದೆ. ನನಗನ್ನಿಸುತ್ತದೆ, ಈ ಶತಮಾನದಲ್ಲೇ ಇಂತಹ ಒಂದು ಪ್ರಸಂಗ ವಿಶ್ವದಲ್ಲೇ ಹಿಂದೆ ಆಗಿರಲಿಲ್ಲ. ಅಷ್ಟು ಜನರ ಪ್ರಾಣಹಾನಿಯಾಗಿದೆ, ಸಾಕಷ್ಟು ಆಸ್ತಿಪಾಸ್ತಿ ಹಾನಿಯಾಗಿದೆ. ಇವರೆಲ್ಲರಿಗೂ ಶ್ರದ್ಧಾಂಜಲಿಯನ್ನು, ಸಂತಾಪವನ್ನು ವ್ಯಕ್ತ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ನಾನು ಭಾವಿಸುತ್ತೇನೆ. ಅದೇ ಪ್ರಕಾರ ಶ್ರೀಮತಿ ನಾಗರತ್ನಮ್ಮನವರು ಅವರ ಬಗ್ಗೆ ನಾವು ಎಷ್ಟು ಮಾತನಾಡಿದರೂ ಕಡಿಮೆಯೇ. ಅವರು ಒಬ್ಬ ಆದರ್ಶನೀಯ ವ್ಯಕ್ತಿಯಾಗಿ, ಈ ಸದನದಲ್ಲಿ ಮಂತ್ರಿಯಾಗಿ ವಿರೋಧಪಕ್ಷದ ನಾಯಕಿಯಾಗಿ, ಇಡೀ ಭಾರತ ದೇಶದಲ್ಲೇ ಮೊದಲನೇ ಮಹಿಳಾ ಅಧ್ಯಕ್ಷೆಯಾಗಿ ಅವರು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ. ಅವರ ನಿಧನದಿಂದಾಗಿ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಅಷ್ಟೇ ಅಲ್ಲ, ಇಡೀ ರಾಜ್ಯಕ್ಕೇ ಹಾನಿಯಾಗಿದೆ. ಏಕೆಂದರೆ ಅವರು ಅಂತಹ ಒಬ್ಬ ಆದರ್ಶನೀಯ ವ್ಯಕ್ತಿಯಾಗಿದ್ದರು. ಇವತ್ತು ಅವರನ್ನು ನಾವು ಕಳೆದುಕೊಂಡಿದ್ದೇವೆ. ಅದೇ ಪ್ರಕಾರ ರಾಜ್ಯದ ಮಾಜಿ ರಾಜ್ಯಪಾಲರೂ ಆದ ಶ್ರೀ ಪಿ. ವೆಂಕಟ್ಟಸುಬ್ಬಯ್ಯ ಸಹ ಈ ರಾಜ್ಯದ ರಾಜ್ಯಪಾಲರಾಗಿ ಸೇವೆ ಮಾಡಿದ್ದಾರೆ. ಅವರು ಸಹ ಇವತ್ತು ನಮ್ಮಲ್ಲಿ ಇಲ್ಲ. ಮತ್ತೊಬ್ಬರು ಭಾರತರತ್ನ ರಾಷ್ಟ್ರದ ಸುಪುತ್ರರಾದಂಥ ಶ್ರೀ ಜೆ.ಆರ್.ಡಿ. ಟಾಟಾ ಅವರನ್ನು ನಾವು ಯಾವ ಶಬ್ದದಿಂದ ವರ್ಣಿಸಬೇಕೆಂದು ಗೊತ್ತಾಗುವುದಿಲ್ಲ. ಏಕೆಂದರೆ ಅಪಾರವಾದ ಸೇವೆಯನ್ನು ಕೈಗಾರಿಕಾ ಕ್ಷೇತ್ರದಲ್ಲಿ, ಈ ದೇಶದಲ್ಲಿ ಅವರು ಮಾಡಿದ್ದಾರೆ. ಈ ದೇಶದಲ್ಲಿ ಏನು ಕೈಗಾರಿಕಾ ಬೆಳವಣಿಗೆಯಾಗಿದೆ, ಅದರ ಬಹಳಷ್ಟು ಶ್ರೇಯಸ್ಸು ಅವರಿಗೆ ಹೋಗಬೇಕಾಗಿದೆ. ಅವರು ನಮ್ಮ ರಾಷ್ಟ್ರದ ಸುಪುತ್ರರು. ಅವರನ್ನು

ಕಳೆದುಕೊಂಡು ಬಹಳ ದೊಡ್ಡ ಹಾನಿ ನಮ್ಮ ದೇಶಕ್ಕೆ, ಅದರಲ್ಲೂ ಕೈಗಾರಿಕಾ ಕ್ಷೇತ್ರಕ್ಕೆ ಆಗಿದೆ. ಅದೇ ಪ್ರಕಾರ ನಮ್ಮ ಪಕ್ಷದ ಶಾಸಕರಾದಂಥ ಶ್ರೀ ಕೃಷ್ಣಮೂರ್ತಿಯವರು ಒಳ್ಳೆಯ ಸಜ್ಜನರು, ಪ್ರಾಮಾಣಿಕರು. ಅವರ ನಿಧನದಿಂದ ನಮ್ಮ ಪಕ್ಷಕ್ಕೆ ಸಹ ಸಾಕಷ್ಟು ಹಾನಿಯಾಗಿದೆ. ಅದೇ ಪ್ರಕಾರ ಶಾಸಕಮಿತ್ರರಾದಂಥ ನಾಗೇಂದ್ರ ಒಮಣ್ಣ ಸಮಜಿಯವರು, ಟಿ.ಎನ್. ಶಿವಣ್ಣನವರು ಅವರುಗಳನ್ನು ನಾವು ಕಳೆದುಕೊಂಡಿದ್ದೇವೆ. ಇವರೆಲ್ಲರ ಆತ್ಮಗಳಿಗೆ ಶಾಂತಿ ಸಿಗಲಿ ಎಂದು ತಾವು ಏನು ಪ್ರಸ್ತಾವನೆಯನ್ನು ಇಟ್ಟಿದ್ದೀರಿ ಅದಕ್ಕೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಸುಮಾರು ಮೂವತ್ತು ಸಾವಿರಕ್ಕೂ ಹೆಚ್ಚು ಜನ, ಬಹುಶಃ ಕಳೆದ ಅನೇಕ ಶತಮಾನಗಳಲ್ಲಿ ಕಾಣದೇ ಇದ್ದಂಥ ಒಂದು ಭೂಕಂಪದಿಂದ ಮೃತಪಟ್ಟಿರತಕ್ಕಂಥ ಸಂದರ್ಭದಲ್ಲಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವುದು ನಮ್ಮ ಆದ್ಯ ಕರ್ತವ್ಯವೆಂದು ನಾನು ಸಹ ಭಾವಿಸುತ್ತೇನೆ. ಬಹುಶಃ ಒಂದು ಕಡೆ ಆತ್ಮಗಳಿಗೆ ಶಾಂತಿ ಕೋರುವಂಥ ಒಂದು ನಿರ್ಣಯವನ್ನು ಒಮ್ಮತದ ಒಂದು ಕರ್ತವ್ಯವನ್ನು ಮಾಡುತ್ತಿರುವುದರ ಜೊತೆಜೊತೆಗೆ ಬಹುಶಃ ಯಾರು ಬದುಕಿದ್ದೂ ಸಹ ಒಂದು ರೀತಿ ಸತ್ತವರಂತೆ ಜೀವನ ನಡೆಸುತ್ತಿದ್ದಾರೆ. ಅವರ ಬಗ್ಗೆಯೂ ಸಹ ಚಿಂತೆ ಮಾಡುವಂಥ ಸಂದರ್ಭ ಬರುತ್ತದೆ. ಆಗ ಚಿಂತೆ ಮಾಡಬೇಕಾಗುತ್ತದೆ. ಕೆಲವರು ಸತ್ತು, ಮತ್ತೆ ಕೆಲವರು ತಮ್ಮ ಕುಟುಂಬವನ್ನು ತೊರೆದು, ಒಂದು ಸ್ಥಿತಿಯಲ್ಲಿ ಇದ್ದರೆ ಮತ್ತೆ ಕೆಲವರು ಬದುಕಿದ್ದೂ ಸಹ ಅವರ ಕುಟುಂಬದ ಯಾವುದೇ ಸದಸ್ಯರನ್ನು ನೋಡದೇ ಒಬ್ಬಂಟಿಕರಂತೆ ಜೀವನ ನಡೆಸತಕ್ಕ ದಾರುಣ ದೃಶ್ಯವನ್ನು ನಾವು ಕಣ್ಣಾರೆ ಕಂಡು ಬಂದಿದ್ದೇವೆ. ಹಿಂದಿನ ಅಧಿವೇಶನದ ಸಂದರ್ಭದಲ್ಲಿ ನಮ್ಮ ಕಣ್ಮುಂದೆ ಇದ್ದಂಥ ಶ್ರೀಮತಿ ನಾಗರತ್ನಮ್ಮನವರು ಇವತ್ತು ನಮ್ಮನ್ನು ಅಗಲಿದ್ದಾರೆ. ಬಹುಶಃ ನಮ್ಮ ರಾಜ್ಯದ ವಿಧಾನ ಮಂಡಲದ ಇತಿಹಾಸದಲ್ಲಿ ಒಬ್ಬ ಮಹಿಳೆ ಶಾಸಕಿಯಾಗಿ, 7 ಬಾರಿ ಸತತವಾಗಿ ಆಯ್ಕೆಯಾಗಿ ಬಂದಿದ್ದಾರೆಂದರೆ, ಬಹುಶಃ ಅವರ ಜನಪ್ರಿಯತೆಗೆ ಇದಕ್ಕಿಂತ ಹೆಚ್ಚಿನ ಸಾಕ್ಷಿ ಬೇಕಾಗಿಲ್ಲವೆಂದು ನಾನಾದರೂ ಭಾವಿಸಿದ್ದೇನೆ. ರಾಜ್ಯದ ವಿಧಾನ ಸಭೆಯ ಮೊದಲ ಅಧ್ಯಕ್ಷಿಣಿಯಾಗಿ, ಒಂದು ಮಾದರಿ ರೀತಿಯ ಅಧ್ಯಕ್ಷಿಣಿಯಾಗಿ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಈ ಕಡೆಯಿಂದ ಪ್ರತಿಪಕ್ಷದ ನಾಯಕಿಯ ಸ್ಥಾನದಲ್ಲಿದ್ದು ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಅನೇಕ ಖಾತೆಗಳ ಒಂದು ಹಿರಿಯ ಸಚಿವಸ್ಥಾನ ಹೊಂದಿ, ತಮ್ಮ ಸೇವೆಯನ್ನು ಸಲ್ಲಿಸಿದರು.

ಒಂದು ರೀತಿ ಜೀವನದ ಕೊನೆಯ ಉಸಿರು ಇರುವವರೆಗೂ ಚುನಾಯಿತ ಪ್ರತಿನಿಧಿಯಾಗಿ ಜನಸೇವೆಯನ್ನು ಮಾಡಿ, ಒಂದು ರೀತಿಯ ಗಂಡೆದೆಯ ನಾಯಕಿಯಂತೆ ತಮ್ಮ ಕರ್ತವ್ಯವನ್ನು ಮಾಡಿ, ಈ ನಾಡಿನ ಜನರಿಗೆ ಸೇವೆ ಸಲ್ಲಿಸಿದ್ದಾರೆ. ಅದೇ ರೀತಿ ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀಮಾನ್ ವೆಂಕಟಸುಬ್ಬಯ್ಯನವರೂ ಇವತ್ತು ನಮ್ಮನ್ನು ಅಗಲಿದ್ದಾರೆ. ಭಾರತ ರತ್ನ ಜೆ.ಆರ್.ಡಿ.. ಟಾಟಾರವರು ಬಹುಶಃ ಕೈಗಾರಿಕಾ ಉದ್ದಿಮೆಯಲ್ಲಿ ಬೇರೆಯವರು ಬೆಳೆದು ನಿಲ್ಲುವುದಕ್ಕೆ ಸರಿಸಾಟಿಯಾಗಿ, ಪ್ರಪಂಚದ ಬೇರೆ ಬೇರೆ ಉದ್ದಿಮೆಗಳ ಜೊತೆ ಪೈಪೋಟಿ ನಡೆಸುವುದಕ್ಕೆ ಬಹಳಷ್ಟು ಸೇವೆ ಮಾಡಿದರು. ಆರ್ಥಿಕ ಕ್ಷೇತ್ರದಲ್ಲಿ ಇವತ್ತು ಈ ದೇಶದಲ್ಲಿ ಏನಾದರೂ ಉನ್ನತಿ ಸಾಧಿಸಿದ್ದರೆ, ಕೈಗಾರಿಕಾ ಕ್ಷೇತ್ರದಲ್ಲಿ ಉನ್ನತಿ ಸಾಧಿಸಿದ್ದರೆ, ಅವರ ಸೇವೆ ಅಮೋಘವಾದುದು ಎನ್ನುವುದು ನಮಗೆಲ್ಲರಿಗೂ ಗೊತ್ತಿರತಕ್ಕ ಸಂಗತಿ. ಅದೇ ರೀತಿಯಲ್ಲಿ ವಿಧಾನ ಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಅನೇಕ ಸದಸ್ಯರುಗಳು ದೈವಾಧೀನರಾಗಿರತಕ್ಕ ಈ ಸಂದರ್ಭದಲ್ಲಿ ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮತ್ತು ಮೃತರ ಕುಟುಂಬದವರಿಗೆ ಈ

ನೋವನ್ನು ಸಹಿಸುವಂಥ ಶಕ್ತಿಯನ್ನು ಕೊಡಲೆಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ತಾವು ಮಂಡಿಸಿರತಕ್ಕ ಸಂತಾಪಸೂಚಕ ನಿರ್ಣಯವನ್ನು ಬೆಂಬಲಿಸಿ, ಮಹಾರಾಷ್ಟ್ರ ಮತ್ತು ನಮ್ಮ ರಾಜ್ಯದ ಹಲವು ಕಡೆಗಳಲ್ಲಿ ನಡೆದಂಥ ಭೂಕಂಪದ ಪರಿಣಾಮವಾಗಿ ಸತ್ತಂಥವರ ಕುಟುಂಬದಲ್ಲಿ ಉಳಿದಿರತಕ್ಕಂಥ ಸದಸ್ಯರಿಗೆ, ಆ ಒಂದು ದುಃಖವನ್ನು ಭರಿಸುವುದಕ್ಕೆ ಭಗವಂತನು ಶಕ್ತಿಯನ್ನು ಕೊಡಲೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ನಮ್ಮ ಸದನದಲ್ಲಿ ಸುಮಾರು 35 ವರ್ಷಗಳ ಕಾಲ ಬಹಳ ಅನುಭವಿ ಆಗಿದ್ದಂಥ ಶ್ರೀಮತಿ ನಾಗರತ್ನಮ್ಮನವರನ್ನು ಕಳೆದುಕೊಂಡಿರತಕ್ಕಂಥಾದ್ದು ನಮ್ಮೆಲ್ಲರಿಗೂ ಸಹಿತ ವೈಯಕ್ತಿಕವಾದ ಒಂದು ನಷ್ಟ. ನಾವು ಆ ಕಡೆ ಕುಳಿತಿದ್ದಾಗ, ಶ್ರೀಮತಿ ನಾಗರತ್ನಮ್ಮನವರು ಈ ಕಡೆ ವಿರೋಧಪಕ್ಷದಲ್ಲಿ ಕುಳಿತಿದ್ದರು. ಬಹುಶಃ ಇಲ್ಲಿ ಕುಳಿತು ಕೊಂಡಿರತಕ್ಕ ಸದಸ್ಯರುಗಳ ಪೈಕಿ ಅವತ್ತು ಮುಖ್ಯಮಂತ್ರಿಯಾಗಿದ್ದಂಥ ಮಾನ್ಯ ಹೆಗಡೆಯವರನ್ನು ಬಿಟ್ಟು, ಬಾಕಿ ನಮ್ಮೆಲ್ಲರಿಗೂ ಸಹಿತ ಕಿವಿ ಹಿಂಡಿ, ಬಹಳ ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಯಾವುದೇ ಒಂದು ಕೆಲಸ ಆಗಬೇಕಾದರೂ ಸಹಿತ, ಬಹಳ ಆಸಕ್ತಿ ವಹಿಸುತ್ತಿದ್ದರು. ತಮ್ಮ ಕ್ಷೇತ್ರದ ಬಗ್ಗೆ ಅಥವಾ ಯಾವುದಾದರೊಂದು ಕೆಲಸ ಆಗಬೇಕಾದರೂ ಸಹ ಬಹಳ ಆಸಕ್ತಿ ವಹಿಸಿ ನಮ್ಮ ಹತ್ತಿರ ಬಂದು ಮಾತನಾಡುತ್ತಿದ್ದರು. ಅವರು ಮಂತ್ರಿಯಾಗಿದ್ದ ಸಂದರ್ಭದಲ್ಲೂ ಸಹ, ಅವರಲ್ಲಿ ಯಾವುದೇ ವ್ಯತ್ಯಾಸವಾಗಿರಲಿಲ್ಲ. ವಿರೋಧ ಪಕ್ಷದ ನಾಯಕಿಯಾಗಿದ್ದಾಗ ಮತ್ತು ಮಂತ್ರಿಯಾಗಿದ್ದಾಗ ಅವರಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲ. ಮತ್ತು ಅವರು 1983ರ ಚುನಾವಣೆಯಲ್ಲಿ ಸೋತಿದ್ದರು. ಆ ಸೋತಿದ್ದಂಥ ಸಂದರ್ಭದಲ್ಲೂ ಸಹ ಅವರು ವಿಚಲಿತರಾಗದೇ, ಮೈಸೂರು ಜಿಲ್ಲೆಯ ಒಬ್ಬ ಜನ-ನಾಯಕಿಯಾಗಿ, ರಾಜ್ಯಾದ್ಯಂತ ಒಬ್ಬ ಆದರ್ಶ ಮಹಿಳೆಯಾಗಿ ಕೆಲಸ ಮಾಡಿದಂತಹ ನಾಗರತ್ನಮ್ಮನವರನ್ನು ನಾವು ಕಳೆದುಕೊಂಡಿರತಕ್ಕಂಥಾದ್ದು ನಿಜಕ್ಕೂ ಸಹಿತ ಬಹಳ ದುಃಖದ ವಿಚಾರ. ಅವರ ಕುಟುಂಬದವರೆಲ್ಲಾ ಮೈಸೂರು ಜಿಲ್ಲೆಯ ಬಹುತೇಕ ತಾಲ್ಲೂಕುಗಳಲ್ಲಿ ಮನೆಮಾತಾಗಿದ್ದಾರೆ. ಬಡಬಗ್ಗರ ಮಕ್ಕಳಿಗೆ, ಅವರ ಕುಟುಂಬವರ್ಗದವರು ನಡೆಸುತ್ತಿರತಕ್ಕ ಹಾಸ್ಪಲ್ ಮತ್ತು ಇತರೆ ಸೌಕರ್ಯಗಳಿಂದ ಬಹಳ ದೊಡ್ಡ ಸೇವೆಯನ್ನು ಮಾಡಿದ್ದಾರೆ. ಹೀಗಾಗಿ ಅವರ ಕುಟುಂಬದವರನ್ನೂ ಸಹಿತ ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ.

11.30 ಎ.ಎಂ

ಈ ಸಂದರ್ಭದಲ್ಲಿ ನಾನು ಅದನ್ನೂ ಸ್ಮರಿಸಿಕೊಳ್ಳುತ್ತೇನೆ. ಇನ್ನು ನಮ್ಮ ಪತ್ರಕರ್ತ ಮಿತ್ರರಾಗಿಧಂತ ಸನ್ಮಾನ್ಯ ಬಸವರಾಜ್‌ರವರು, ಹಿಂದು ಪತ್ರಿಕೆಯಲ್ಲಿ ಕೆಲಸ ಮಾಡಿದ್ದಂಥ ಸನ್ಮಾನ್ಯ ರಾಮಸ್ವಾಮಿಯವರು ಹಾಗೂ ಮಾನ್ಯ ಜಿ.ಬಿ. ಜೋಶಿಯವರು ಕರ್ನಾಟಕದ ಪತ್ರಿಕಾ ರಂಗಕ್ಕೆ ಮಾಡಿರತಕ್ಕಂಥ ಕೆಲಸವನ್ನು ನಾವು ಮರೆಯಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇವರುಗಳ ಹೆಸರುಗಳನ್ನೂ ಸಹ ತಾವು ದಯಮಾಡಿ ಸಂತಾಪ ಸೂಚಕ ನಿರ್ಣಯದಲ್ಲಿ ಸೇರಿಸಬೇಕೆಂದು ತಮಗೆ ಸಲಹೆ ಮಾಡುವುದರ ಜೊತೆಗೆ ವಿನಂತಿಯನ್ನೂ ಮಾಡಿಕೊಳ್ಳುತ್ತೇನೆ. ಮತ್ತೆ ಸನ್ಮಾನ್ಯ ಟಾಟಾ ರವರು ಖಾಸಗಿ ಕ್ಷೇತ್ರದಲ್ಲಿ ಆದರ್ಶ ಉದ್ಯಮಿಯಾಗಿದ್ದರು. ನಮಗೆ ಖಾಸಗಿ ಕ್ಷೇತ್ರದ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು ಆದರೆ ಅವರು ಕಟ್ಟಿರತಕ್ಕಂಥ ಸಂಸ್ಥೆಗಳು ಏನಿವೆ ಆ ಸಂಸ್ಥೆಗಳು ಖಾಸಗಿ ಕ್ಷೇತ್ರದಲ್ಲಿ ಆದರ್ಶ ಸಂಸ್ಥೆಗಳೆಂದು ಹೇಳಬೇಕಾಗುತ್ತದೆ. ನಮ್ಮ ರಾಷ್ಟ್ರದ ಕೈಗಾರಿಕಾ ರಂಗದಲ್ಲಿ ಹಿಮಾಲಯದ ಎತ್ತರಕ್ಕೆ ಬೆಳೆದಿದ್ದಂಥ ಟಾಟಾರವರು ನಿಧನರಾಗಿರುವುದು ಈ ದೇಶದ ಕೈಗಾರಿಕಾ ಬೆಳವಣಿಗೆಗೆ ತುಂಬಲಾರದ ನಷ್ಟವೆಂದು ಹೇಳಿದರೆ ತಪ್ಪಾಗಲಾರದು. ರಾಷ್ಟ್ರದ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಖಾಸಗಿ ಮತ್ತು ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳ

ಬಗ್ಗೆ ಚರ್ಚೆ ನಡೆದಂಥ ಸಂದರ್ಭದಲ್ಲಿ ಅವರು ಮಾತನಾಡಿದ ಸಂದರ್ಶನವನ್ನು ಅವರು ಸತ್ತ ದಿನ ದೂರದರ್ಶನದಲ್ಲಿ ಪ್ರಸಾರ ಮಾಡಲಾಯಿತು. ಆ ವಯಸ್ಸಿನಲ್ಲೂ ಅವರಿಗೆ ಜನಗಳ ಬಗ್ಗೆ ಮತ್ತು ಕೈಗಾರಿಕಾ ಕ್ಷೇತ್ರಗಳ ಬಗ್ಗೆ ಇದ್ದಂಥ ಅನುಕಂಪ ಅದ್ವಿತೀಯವೆಂದು ನಾನು ಭಾವಿಸಿಕೊಳ್ಳುತ್ತೇನೆ. ಅವರ ಸಾವಿನಿಂದ ನಮ್ಮ ದೇಶದ ಕೈಗಾರಿಕೋದ್ಯಮಕ್ಕೆ ನಷ್ಟವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಅವರ ತತ್ವಗಳ ಬಗ್ಗೆ ಭಿನ್ನಾಭಿಪ್ರಾಯ ಇದೆ. ಆದರೆ ಅವರು ಮಾಡಿರುವಂಥ ಕೆಲಸಗಳನ್ನು ನಾವು ಮರೆಯಲಿಕ್ಕೆ ಸಾಧ್ಯವಿಲ್ಲ. ಅವರನ್ನು ಈ ಸಂದರ್ಭದಲ್ಲಿ ನಾವು ನೆನಪಿಸಿಕೊಳ್ಳುತ್ತೇವೆ. ಹಾಗೆಯೇ ಮಾನ್ಯ ಪಿ. ವೆಂಕಟಸುಬ್ಬಯ್ಯನವರು ನಮ್ಮ ರಾಜ್ಯದ ರಾಜ್ಯಪಾಲರಾಗಿ ಸೇವೆ ಮಾಡಿದ್ದಾರೆ. ಅವರ ಕಾರ್ಯವೈಖರಿ ಬಗ್ಗೆ ನಮ್ಮದೇ ಆದಂಥ ಅಭಿಪ್ರಾಯಗಳಿವೆ. ಮಾನ್ಯ ವೆಂಕಟಸುಬ್ಬಯ್ಯನವರು ನಮ್ಮ ರಾಜ್ಯದ ರಾಜ್ಯಪಾಲರಾಗಿ, ಆಂಧ್ರಪ್ರದೇಶದ ರಾಜಕಾರಣಿಯಾಗಿ ಕೆಲಸ ಮಾಡಿದ್ದಾರೆ. ಅವರು ಲೋಕಸಭೆ ಸದಸ್ಯರಾಗಿ ಕೇಂದ್ರದಲ್ಲಿ ಮಂತ್ರಿಗಳು ಆಗುವವರೆಗೂ ಅವರು ಆಂಧ್ರಪ್ರದೇಶದಲ್ಲಿ ಒಂದು ಊರಿನ ಪಂಚಾಯಿತಿ ಅಧ್ಯಕ್ಷರಾಗಿದ್ದವರು. ಗ್ರಾಮಗಳ ಸರ್ವಾಂಗೀಣ ಪ್ರಗತಿ ಬಗ್ಗೆ, ಬಡ ಜನರ ಬಗ್ಗೆ ಅವರಿಗೆ ಅನುಕಂಪ ಇತ್ತು. ಹಳ್ಳಿಗಾಡು ಅಭಿವೃದ್ಧಿಗಳ ಬಗ್ಗೆ ಅವರು ಅನೇಕ ಸಂದರ್ಭದಲ್ಲಿ ತಮ್ಮ ಅನುಕಂಪವನ್ನು ವ್ಯಕ್ತಪಡಿಸಿದ್ದಾರೆ. ಒಂದು ಸಾರಿ ಈ ಸದನದ ಹಿಂದಿನ ಅಧ್ಯಕ್ಷರಾಗಿದ್ದ ಬಣಕಾರ್‌ರವರೊಡನೆ ಹಿರೇಕೆರೂರು ತಾಲ್ಲೂಕಿನಲ್ಲಿ ನಾನು ಪ್ರವಾಸ ಮಾಡಿದ್ದಾಗ ಮಾನ್ಯ ವೆಂಕಟಸುಬ್ಬಯ್ಯನವರೂ ನಮ್ಮ ಜೊತೆಯಲ್ಲಿದ್ದರು. ಸಾಮಾನ್ಯ ಜನರ ಕಷ್ಟ ಸುಖದ ಬಗ್ಗೆ ಅವರಿಗೆ ಅಪಾರವಾದ ಅನುಭವ ಇತ್ತು. ಇವತ್ತು ಅವರು ಆಕಸ್ಮಿಕವಾಗಿ ನಿಧನರಾಗಿದ್ದಾರೆ. ಅವರ ನಿಧನದಿಂದ ನಮ್ಮ ದೇಶಕ್ಕೆ ಅಪಾರವಾದ ನಷ್ಟವುಂಟಾಗಿದೆ. ಇವರ ಅಗಲಿಕೆಯಿಂದ ಉಂಟಾಗಿರುವ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ಭಗವಂತನು ಕೊಡಲೆಂದು ಪ್ರಾರ್ಥಿಸಿ, ತಾವು ಏನು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರಿ ಅದರಲ್ಲಿ ನಾನು ಹೇಳಿರತಕ್ಕಂಥ ಅಂದರೆ ಪತ್ರಿಕಾ ರಂಗದಲ್ಲಿ ಕೆಲಸ ಮಾಡಿ ನಿಧನರಾಗಿರತಕ್ಕಂಥ ಮಾನ್ಯ ಬಸವರಾಜು, ಮಾನ್ಯ ರಾಮಸ್ವಾಮಿ, ಮಾನ್ಯ ಜಿ.ಬಿ. ಜೋಶಿಯವರುಗಳ ಹೆಸರುಗಳನ್ನು ಇದರಲ್ಲಿ ಸೇರಿಸಬೇಕೆಂದು ವಿನಂತಿ ಮಾಡಿಕೊಂಡು ಅವರುಗಳು ಮಾಡಿರುವ ಸೇವೆಯನ್ನು ಸ್ಮರಣೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಸನ್ಮಾನ್ಯ ಅಧ್ಯಕ್ಷರೆ, ಇದು ಒಂದು ವಿಧಿಯ ವಿಪರ್ಯಾಸ, ನಾವು ಇದನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ. ಪ್ರತಿ ಸಾರಿಯೂ ಈ ಸಭೆ ಸಂತಾಪ ಸೂಚಕ ನಿರ್ಣಯದಿಂದಲೇ ಪ್ರಾರಂಭವಾಗುತ್ತಿದೆ. ಇದು ಅತ್ಯಂತ ಶೋಚನೀಯವಾದ ಪರಿಸ್ಥಿತಿ. ಈಗ ತಾವು ಏನು ಒಂದು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರಿ. ಈ ನಿರ್ಣಯವನ್ನು ನಾನು ಬೆಂಬಲಿಸುತ್ತಾ, ಈ ನಿರ್ಣಯದ ಜೊತೆಯಲ್ಲಿ ಇನ್ನೂ 4 ಜನರು ಈ ನಾಡಿಗೋಸ್ಕರ ದುಡಿದು ನಿಧನರಾಗಿರತಕ್ಕಂಥ ಹಿರಿಯರ ಹೆಸರುಗಳನ್ನು ಸೇರಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕನ್ನಡ ಚಿತ್ರರಂಗದಲ್ಲಿ ಅಪಾರವಾದ ಸೇವೆ ಮಾಡಿರುವ ಸನ್ಮಾನ್ಯ ಜಿ.ಕೆ. ವೆಂಕಟೇಶ್, ಕನ್ನಡ ಚಿತ್ರ ನಟ ಸುಂದರಕೃಷ್ಣ ಅರಸ್, ಖ್ಯಾತ ನಾಟಕಕಾರ ಜಡಭರತ ಹಾಗೂ ಪತ್ರಿಕಾ ರಂಗದಲ್ಲಿ ದುಡಿದು ನಿಧನರಾಗಿರುವ ಮಾನ್ಯ ರಾಮಸ್ವಾಮಿಯವರು, ಸನ್ಮಾನ್ಯ ಬಸವರಾಜ್‌ರವರು ಹಾಗೂ ಜಿ.ಬಿ. ಜೋಶಿಯವರ ಹೆಸರುಗಳನ್ನು ತಾವು ಅಂತಿಮವಾಗಿ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸುವಾಗ ಸೇರಿಸಬೇಕೆಂದು ಈ ಮೂಲಕ ಮನವಿ ಮಾಡುತ್ತೇನೆ. ಇಷ್ಟು ಜನರು ಆಸ್ತಂಗತವಾದ ವಿಷಯವು ನಮ್ಮನ್ನು ಕಣ್ಣೀರ ಸಾಗರದಲ್ಲಿ ಮುಳುಗಿಸಿದೆ. ಆಮೇಲೆ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಈ ಸದನದಲ್ಲಿ ಒಬ್ಬ ಭೂಷಣ ವ್ಯಕ್ತಿಯಾಗಿದ್ದರು ಮತ್ತು ಪ್ರಪ್ರಥಮವಾಗಿ ಈ ಸದನದಲ್ಲಿ ಮಹಿಳಾ ಅಧ್ಯಕ್ಷರಾಗಿದ್ದವರು. ಅವರು ಈ ಸದನದಲ್ಲಿ

ಅಧ್ಯಕ್ಷರಾಗಿದ್ದಾಗ ನಾನು ಈ ಮನೆಯಲ್ಲಿ ಸದಸ್ಯನಾಗಿದ್ದೆ. ನಾನು ಇತ್ತೀಚೆಗೆ ಅವರೊಡನೆ ಮಾತನಾಡುವಾಗ ನೀವು ಬರೀ ಮಹಿಳೆ ಮಾತ್ರ ಅಲ್ಲ ಒಬ್ಬ ವೀರ ಪುರುಷನೂ ಹೌದು ಎಂದು ಅವರಿಗೆ ಹೇಳಿದ್ದೆ. ಅವರು ಎರಡೂ ಗುಣಗಳನ್ನು ಹೊಂದಿದ್ದರು. ಅವರು ಬರೀ ಮಹಿಳೆಯಲ್ಲ, ಕ್ಷಾತ್ರ ಹಾಗೂ ವೀರ ಮಹಿಳೆಯಾಗಿ, ಒಬ್ಬ ಶಕ್ತಿವಂತ ಮಹಿಳೆಯಾಗಿ, ಧೀರ ಧೀಮಂತ ಮಹಿಳೆಯಾಗಿ ಕೆಲಸ ಮಾಡಿದಂಥವರು. ಅವರು 3 ಜಿಲ್ಲೆಗಳಿಗೆ ಸೇರಿದವರಾಗಿದ್ದರು. ಅವರು ಹುಟ್ಟಿದ್ದು ಹಾಸನ ಜಿಲ್ಲೆಯಲ್ಲಿ, ಬೆಳೆದಿದ್ದು ಬೆಂಗಳೂರು ಜಿಲ್ಲೆಯಲ್ಲಿ, ಮದುವೆಯಾಗಿದ್ದು ಮೈಸೂರು ಜಿಲ್ಲೆಯಲ್ಲಿ. ಅವರ ಪತಿ ಕಬ್ಬಳ್ಳಿ ಸಾಹುಕಾರ್ ಸುಬ್ಬಣ್ಣನವರು. ಅವರು ಅತ್ಯಂತ ಮೇರು ವ್ಯಕ್ತಿತ್ವ ಹೊಂದಿದ್ದವರು. ಈ ನಾಡಿಗೆ ಅವರು ಆದರ್ಶಪ್ರಾಯರಾಗಿದ್ದರು. ಅವರ ಒಂದು ಆದರ್ಶವನ್ನೇ ಬೆಳೆಸಿಕೊಂಡು ಬಂದು ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಶಾಸನ ಸಭೆಗೆ ಏಳು ಸಲ ಆರಿಸಿ ಬಂದರು. ಅವರ ಈ ಒಂದು ಆಗಲಿಕೆ ಕೇವಲ ಗುಂಡ್ಲುಪೇಟೆ ಕ್ಷೇತ್ರಕ್ಕೆ ಅಲ್ಲ, ಇಡೀ ಕರ್ನಾಟಕ ರಾಜ್ಯಕ್ಕೆ ಹಾಗೂ ಇಡೀ ಮಹಿಳಾ ಸಮೂಹಕ್ಕೆ ಹಾಗೂ ಈ ರಾಜ್ಯದ ಸಮಗ್ರತೆಗೆ ಅತ್ಯಂತ ಹೆಚ್ಚಿನ ರೀತಿಯಲ್ಲಿ ನಷ್ಟವಾಗಿದೆಯೆಂದು ಹೇಳುತ್ತೇನೆ. ಅವರು ಈ ಸಭೆಗೆ ಬಂದರೆ ಎಲ್ಲರಿಗೂ ಒಂದು ಹೊಸ ಹುರುಪು ಬರುತ್ತಿತ್ತು. ಕೊನೆ ಕೊನೆಗೆ ಅವರನ್ನು ಇಬ್ಬರು ಹಿಡಿದುಕೊಂಡು ಮೆಟ್ಟಿಲು ಹತ್ತಿಸಿ ಇಳಿಸಬೇಕಾಗಿತ್ತು.

ಒಂದು ಸಾರಿ ಯಾರನ್ನೂ ಹಿಡಿಯದೆ ಮೆಟ್ಟಿಲುಗಳನ್ನು ಹತ್ತಿ ಬಂದರು. ಕೊನೆಯವರೆಗೂ ಈ ಸದನದಲ್ಲಿ ಸೇವೆ ಮಾಡತಕ್ಕಂಥ ಅವಕಾಶ ತಮಗೆ ದೊರಕಲಿ ಎನ್ನುವಂಥ ಉತ್ಸಾಹದಿಂದ ಅವರು ಇದ್ದರು. ಕೊನೆ ಕೊನೆಯಲ್ಲಿ ಈ ಸದನದ ಅಧ್ಯಕ್ಷರಾಗಿ ಕೆಲಸ ಮಾಡಬೇಕೆಂಬ ಉತ್ಸಾಹವೂ ಸಹ ಅವರಿಗೆ ಇತ್ತು. ಶಾರೀರಿಕವಾಗಿ ಚೈತನ್ಯ ಕುಗ್ಗಿದ್ದರೂ ಸಹ ಈ ರಾಜ್ಯದ, ಈ ದೇಶದ ಕೆಲಸ ಮಾಡಬೇಕೆಂಬ ಆಕಾಂಕ್ಷೆಯನ್ನು, ವ್ಯಕ್ತಿತ್ವವನ್ನು ಹೊಂದಿದವರಾಗಿದ್ದರು. ಬೆಂಗಳೂರು ನಗರದ ಹೊರವಲಯದಲ್ಲಿರುವ ಅವರ ತೋಟದ ಮನೆಯಲ್ಲಿ ಅವರನ್ನು ನಾನು ಒಂದು ಸಾರಿ ಭೇಟಿ ಮಾಡಿದಾಗ ಅವರ ಚೈತನ್ಯ ಕುಗ್ಗಿದ್ದರೂ ಸಹಾ ಅವರು ಈ ರಾಜ್ಯದ, ನಾಡಿನ ಬಗ್ಗೆ ಅಪಾರವಾದ ಚಿಂತನೆ ಮಾಡಿದಂಥ ಒಬ್ಬ ವೀರ ಮಹಿಳೆಯಾಗಿದ್ದರೆಂದು ನಾನು ಹೇಳುತ್ತೇನೆ. ಶಾಸನ ಸಭೆಯ ಪ್ರಪ್ರಥಮ ಮಹಿಳಾ ಅಧ್ಯಕ್ಷರಾಗಿ ಅವರು ಕೆಲಸ ಮಾಡಿರುವುದರಿಂದ ಅವರ ಬಗ್ಗೆ ವಿಶೇಷವಾದ ಗಮನ ಹರಿಸಿ ಯಾವುದಾದರೂ ಒಂದು ರೀತಿಯಲ್ಲಿ ಅವರ ಹೆಸರು ಉಳಿಯುವ ಹಾಗೆ ಒಂದು ಸ್ಮಾರಕವನ್ನು ಮಾಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡುತ್ತಿದ್ದೇನೆ. ಶ್ರೀಮತಿ ನಾಗರತ್ನಮ್ಮನವರಿಗೆ ಅಪಾರವಾದ ಸ್ನೇಹಿತರುಗಳಿದ್ದರು; ಈ ಸದನದಲ್ಲಿರತಕ್ಕಂಥವರೂ ಕೂಡ ಅವರು ಯಾವುದೇ ಪಕ್ಷದಲ್ಲಿದ್ದರೂ ಸಹ ಅವರ ಸ್ನೇಹಕ್ಕೆ ಒಳಗಾಗಿದ್ದರು. ಅವರ ಸ್ನೇಹವನ್ನು ಎಲ್ಲರೂ ಮೆಚ್ಚಿದ್ದರು. ಅವರು ಒಂದು ದಿನ ಉಟ್ಟ ಉಡುಗೆಯನ್ನು ಮತ್ತೊಂದು ದಿನ ಉಡುತ್ತಿರಲಿಲ್ಲ. ಈ ದಿನ ಉಟ್ಟ ಉಡುಗೆ ಮತ್ತೊಂದು ಸಾರಿ ಉಡುಗೆಯನ್ನು ಮತ್ತೊಂದು ದಿನ ಉಡುತ್ತಿರಲಿಲ್ಲ. ಈ ದಿನ ಉಟ್ಟ ಉಡುಗೆ ಮತ್ತೊಂದು ಸಾರಿ ಉಡಬೇಕಾದರೆ 365 ದಿವಗಳಾಗುತ್ತಿದ್ದವೆಂದು ನನಗನಿಸುತ್ತದೆ. ಅಂಥ ಹೊಸ ವೈಶಿಷ್ಟ್ಯವನ್ನು ಹೊಂದಿದ್ದಂಥ ವ್ಯಕ್ತಿಯಾಗಿದ್ದರು. ಅವರ ಅಗಲಿಕೆಯಿಂದ ಈ ಒಂದು ನಾಡಿಗೆ ಹಾಗೂ ನಮ್ಮ ಸದನಕ್ಕೆ ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಅವರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಇದರ ಜೊತೆಗೆ ಮಾನ್ಯ ಪಿ. ವೆಂಕಟಸುಬ್ಬಯ್ಯನವರು ಈ ರಾಜ್ಯದ ರಾಜ್ಯಪಾಲರಾಗಿ ಕೆಲಸ ಮಾಡಿದ್ದಾರೆ. ಅವರು ನಮ್ಮನ್ನೆಲ್ಲಾ ಅಗಲಿರತಕ್ಕಂಥಾದ್ದು ಕೂಡ ನಮ್ಮ ನಾಡಿಗೆ ಅಪಾರ ನಷ್ಟವಾಗಿದೆ. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಅಪಾರವಾದ ಸೇವೆ ಮಾಡಿರತಕ್ಕಂಥ ಒಬ್ಬ ಧೀಮಂತ ಹಿರಿಯ ವ್ಯಕ್ತಿಯಾಗಿದ್ದರು. ಅವರ ಆತ್ಮಕ್ಕೂ ನಾನು ಶ್ರದ್ಧಾಂಜಲಿಯನ್ನು

ಅರ್ಪಿಸುತ್ತೇನೆ. ಅಮೇಲೆ ಶ್ರೀ ಕೃಷ್ಣಮೂರ್ತಿಯವರು ಅಗಲಿರುವುದು ಕೇವಲ ವಿಧಾನಪರಿಷತ್ತಿಗೆ ಮಾತ್ರವಲ್ಲ, ಇಡೀ ನಾಡಿಗೆ ನಷ್ಟವುಂಟಾಗಿದೆ. ಅವರು ತಮ್ಮ ರಾಜಕೀಯ ಜೀವನದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನೂ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಜೆಮ್‌ಶೆಡ್‌ಜೀ ಟಾಟಾರವರ ಬಗ್ಗೆ ನಾವು ಎಷ್ಟು ವಿಶಿಷ್ಟವಾಗಿ ಹೇಳಿದರೂ ಕೂಡ ಸಾಲದು. ಅಂಥ ಒಂದು ವಿಶಿಷ್ಟ ಬಹುಮುಖ ಪ್ರತಿಭೆ ಹೊಂದಿದ್ದಂಥ ವ್ಯಕ್ತಿ. ಅವರ ಅಗಲುವಿಕೆಯಿಂದಾಗಿ ಇಡೀ ದೇಶವೇ ಅಪಾರ ನಷ್ಟಕ್ಕೆ ಈಡಾಗಿದೆ ಎಂದು ಹೇಳ ಬಯಸುತ್ತೇನೆ.

ದಿವಂಗತ ಶ್ರೀಮಾನ್ ಟಿ.ಎಸ್. ಶಿವಣ್ಣನವರನ್ನು ನಾನು ನೋಡಿದ್ದೇನೆ. ಆ ಕಾಲದಲ್ಲಿ ಬಹಳ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿದಂಥ ವ್ಯಕ್ತಿ ಅವರು. ಅಂಥ ಒಬ್ಬ ಧೀಮಂತ ವ್ಯಕ್ತಿಯನ್ನು ಕೂಡ ನಾವು ಇಂದು ಕಳೆದುಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ, ನಮ್ಮನ್ನು ಅಗಲಿದ ಈ ಮಹನೀಯರ ಬಗ್ಗೆ ಏನು ಸಂತಾಪ ಸೂಚಕ ನಿರ್ಣಯವನ್ನು ತಾವು ತಂದಿದ್ದೀರಿ, ಅದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ, ಮತ್ತೊಮ್ಮೆ ಈ ನಾಲ್ಕು ಜನ ಹಿರಿಯರ ಹೆಸರುಗಳು ಏನು ಬಿಟ್ಟು ಹೋಗಿದೆ ಅದನ್ನೂ ಸೇರಿಸಿ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರೊ: ಎಂ.ಡಿ. ನಂಜುಂಡ ಸ್ವಾಮಿ (ಧಾರವಾಡ ಗ್ರಾಮಾಂತರ) : ಸನ್ಮಾನ್ಯ ಅಧ್ಯಕ್ಷರೇ, ಭೂಕಂಪದ ಕಾರಣದಿಂದಾಗ ಆಕಾಲಿಕವಾಗಿ ಅಸುನೀಗಿದ ಎಲ್ಲಾ ನಾಗರೀಕರಿಗೆ ಮತ್ತು ನಮ್ಮನ್ನು ಅಗಲಿರುವ ಎಲ್ಲಾ ಗಣ್ಯರಿಗೆ ರೈತಸಂಘದ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

+ ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಧ್ವನಿಗೂಡಿಸುತ್ತಾ, ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಬಗ್ಗೆ ಕೆಲವು ಮಾತುಗಳನ್ನು ಆಡಲು ಇಚ್ಛಿಪಡುತ್ತೇನೆ. ನಮ್ಮ ಮೈಸೂರು ಜಿಲ್ಲೆಯ ಒಳಗೆ 'ಅಮ್ಮಾ' ಎಂದೇ ಪ್ರಸಿದ್ಧರಾಗಿರತಕ್ಕಂಥ ನಾಗರತ್ನಮ್ಮನವರು ಸ್ವರ್ಗಸ್ಥರಾದಾಗ ಅತೀ ಹೆಚ್ಚಿನ, ತುಂಬಲಾರದಂಥ ನಷ್ಟವಾದುದು ಮೈಸೂರು ಜಿಲ್ಲೆಗೆ. ಅವರು 1923ರಲ್ಲಿ ಮೈಸೂರು ಜಿಲ್ಲೆಯ ಅತ್ಯಂತ ಹೆಸರಾಂತ ಪ್ರಮುಖ ಮನೆತನದವರಾದ ಕಬ್ಬಳ್ಳಿ ಸುಬ್ಬಣ್ಣನವರು, ಅಂದರೆ ಇವರು ಬಹಳ ಹೆಸರುವಾಸಿಯಾದ ಮನೆತನದವರಾಗಿದ್ದರಲ್ಲದೆ ಮೈಸೂರು ಜಿಲ್ಲೆಯ ಪ್ರಪ್ರಥಮ ಜಿಲ್ಲಾಬೋರ್ಡ್‌ನ ಅಧ್ಯಕ್ಷರಾಗಿದ್ದವರು. ಅಂಥ ಮಾನ್ಯ ಕಬ್ಬಳ್ಳಿ ಸುಬ್ಬಣ್ಣನವರನ್ನು ನಾಗರತ್ನಮ್ಮನವರು 1949 ರಲ್ಲಿ ಲಗ್ನವಾದರು. ಆದರೆ ಅವರ ವೈವಾಹಿಕ ಜೀವನವು ಅಷ್ಟು ದೀರ್ಘಾವಧಿವರೆಗೆ ನಡೆಯಲಿಲ್ಲ. ಸುಮಾರು 30 ವರ್ಷದವರಾಗಿರುವಾಗ ನಾಗರತ್ನಮ್ಮನವರು ತಮ್ಮ ಪತಿಯನ್ನು ಕಳೆದುಕೊಂಡರು. ಅಂಥ ಸಂದರ್ಭದಲ್ಲಿ ತನ್ನ ತವರು ಮನೆಗೆ ಬರಬೇಕೆನ್ನುವಾಗ ಆ ಜಿಲ್ಲೆಯ ಅನೇಕ ತಾಲ್ಲೂಕುಗಳ ಪ್ರಮುಖರು ಇವರನ್ನು ಕಂಡು ಭೇಟಿ ಮಾಡಿ ಅವರ ಮನೆತನದ ಹೆಸರನ್ನು ಉಳಿಸಿಕೊಳ್ಳಬೇಕು, ಎಂದು ಬಹಳವಾಗಿ ಕೇಳಿಕೊಂಡಾಗ ಪತಿಯ ಮನೆತನದ ಮೇಲೆ ಜನರು ಇಟ್ಟ ಪ್ರೀತಿವಿಶ್ವಾಸಗಳನ್ನು ಕಂಡು ಅದನ್ನು ಮನಗಂಡು ಪತಿವಿಯೋಗದಿಂದ ಆಗಿರತಕ್ಕಂಥ ದುಃಖವನ್ನು ಮರೆಯುವುದಕ್ಕಾಗಿ ರಾಜಕೀಯ ಜೀವನವನ್ನು ಪ್ರವೇಶ ಮಾಡಿದರು. ಹೀಗೆ ರಾಜಕೀಯ ಜೀವನದಲ್ಲಿದ್ದುಕೊಂಡು ಅನೇಕ ಜನ ಬಡವರ ಸೇವೆಯನ್ನು ಮಾಡುತ್ತಾ ಪತಿವಿಯೋಗದ ದುಃಖವನ್ನು ಮರೆಯುವುದಕ್ಕೆ ಯತ್ನಿಸಿದರು.

ದಿವಂಗತ ನಾಗರತ್ನಮ್ಮನವರು 1957 ರಿಂದ ಸತತವಾಗಿ ಗುಂಡ್ಲುಪೇಟೆ ಕ್ಷೇತ್ರದಿಂದ ಪ್ರತಿನಿಧಿಸಿ, ಅಲ್ಲಿನ ಸರ್ವತೋಮುಖ ಅಭಿವೃದ್ಧಿಗಾಗಿ ಅನೇಕ ರೀತಿಯಲ್ಲಿ ದುಡಿದಿದ್ದಾರೆ. ಅವರು ಅಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಮೈಸೂರಿನಲ್ಲಿಯೂ ಕೂಡ ಮಾತೃಮಂಡಳಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅವರು ನೇರ ನಡೆನುಡಿಯುಳ್ಳವರಾಗಿದ್ದರು. ಯಾರೇ ಆಗಿರಲಿ ಮಾಡಿದ ತಪ್ಪನ್ನು ಅವರ ಎದುರೇ ಹೇಳುವಲ್ಲಿ ತುಂಬಾ ನಿಷ್ಠೂರರಾಗಿದ್ದರು. ಅವರು ರಾಜ್ಯದಲ್ಲಿ ಒಂದು ದಾಖಲೆಯನ್ನು ಸ್ಥಾಪಿಸಿದ್ದಾರೆ. ಈ ಶಾಸಕಾಂಗದಲ್ಲಿ ಯಾವ ಮಹಿಳೆಯೂ ಸೃಷ್ಟಿಸದೇ ಇದ್ದಂಥ ದಾಖಲೆ ಅದು. ಅವರು ಒಂದೇ ಕ್ಷೇತ್ರದಿಂದ ಏಳು ಬಾರಿ ಸ್ಪರ್ಧಿಸಿ ಬಂದಂಥವರು ಆಗಿದ್ದರು. ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಇನ್ಯಾವ ರಾಜ್ಯಗಳಲ್ಲಿಯೂ ಇಂದು ಒಂದು ಉದಾಹರಣೆ ಇರಲಾರದು ಎಂದು ನಾನು ಭಾವಿಸುತ್ತೇನೆ. ಇಷ್ಟೇ ಅಲ್ಲದೆ, ಅವರು ಅನೇಕ ರಂಗಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಮೈಸೂರು ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಾಗ ಅವರನ್ನು ನಿಕಟವಾಗಿ ನೋಡತಕ್ಕಂಥ. ಒಂದು ಸಂದರ್ಭ ನನಗೆ ಒದಗಿತ್ತು. ಅವರು ಆ ಸಂದರ್ಭಗಳಲ್ಲಿ ಅನೇಕ ವಿಚಾರಗಳ ಬಗ್ಗೆ ಅರಿಕೆ ಮಾಡಿಕೊಳ್ಳುತ್ತಿದ್ದರು. ಅವರಿಗೆ ಕೋಟ್ಯಾಂತರ ರೂಪಾಯಿಗಳ ಆಸ್ತಿ ಇದ್ದರೂ ಕೂಡ ಯಾವುದೇ ದುಂದು ವೆಚ್ಚವನ್ನು ಯಾರೇ ಆಗಲಿ ಮಾಡುವುದನ್ನು ಅವರು ಸಹಿಸುತ್ತಾ ಇರಲಿಲ್ಲ. ಅದರಂತೆಯೇ ತಾವು ಕೂಡ ದುಂದುವೆಚ್ಚವನ್ನು ಮಾಡುತ್ತಿರಲಿಲ್ಲ. ಅವರ ಅಗಲುವಿಕೆಯಿಂದ ನಮ್ಮ ಜಿಲ್ಲೆಗೆ ನಿಜವಾಗಿಯೂ ತುಂಬಲಾರದ ನಷ್ಟ ಉಂಟಾಗಿದೆ. ಅವರ ಅಗಲುವಿಕೆಯಿಂದ ಉಂಟಾದ ದುಃಖವನ್ನು ಮರೆಯಲು ಅವರ ಕುಟುಂಬ ವರ್ಗದವರಿಗೆ ದೇವರು ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) : ಮಾನ್ಯ ಅಧ್ಯಕ್ಷರೇ, ಇವೊತ್ತು ಮಹಾರಾಷ್ಟ್ರದಲ್ಲಿ ಹಾಗೂ ನಮ್ಮ ರಾಜ್ಯದ ಬೀದರ್, ಗುಲ್ಬರ್ಗ, ಬಿಜಾಪುರ ಜಿಲ್ಲೆಗಳಲ್ಲಿ ಭೂಕಂಪವಾಗಿ ಸಾವಿರಾರು ಜನರು ಸತ್ತಿದ್ದಾರೆ. ನಮ್ಮ ದೇಶದಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನರು ಸತ್ತಿರುವುದು ಇದೇ ಮೊದಲ ಬಾರಿ ಎಂದು ಕಾಣುತ್ತದೆ. ನಾವು ಕೂಡ ಆ ಒಂದು ಸಂದರ್ಭವನ್ನು ಹೋಗಿ ನೋಡಿದ್ದೇವೆ. ಅಲ್ಲಿಯ ಜನರ ದುಃಖ ಸಂತಾಪಗಳನ್ನು ಯಾರಿಂದಲೂ ನೋಡುವುದಕ್ಕೆ ಸಾಧ್ಯವಿಲ್ಲ. ಮತ್ತು ಅದನ್ನು ಇಲ್ಲಿ ವರ್ಣಿಸಲು ಕೂಡ ಆಗಲಾರದು. ಮಾನ್ಯ ಅಧ್ಯಕ್ಷರು ತಂದಂಥ ಸಂತಾಪ ಸೂಚಕ ನಿರ್ಣಯದಲ್ಲಿ ಸೂಚಿಸಿರುವ ನಮ್ಮನ್ನು ಆಗಲಿದ ಎಲ್ಲಾ ಗಣ್ಯರಿಗೆ ಶಾಂತಿ ಸಿಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ವಿಶೇಷತಃ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ, ಈ ವಿಧಾನ ಸಭೆಯ ಒಂದೆರಡು ಸಭೆಗಳನ್ನು ಬಿಟ್ಟರೆ ಉಳಿದಂತೆ ಎಲ್ಲಾ ಸಭೆಯಲ್ಲೂ ಸದಸ್ಯರಾಗಿದ್ದರು ಎಂದು ನನಗನ್ನಿಸುತ್ತದೆ. ಅವರು ಸತತವಾಗಿ ಆಯ್ಕೆಯಾಗಿ ಬರುತ್ತಿದ್ದರು.

ಅವರು ಗಂಡಸರು ಹೇಗೆ ಕೆಲಸ ಮಾಡುತ್ತಾರೋ ಆ ಪ್ರಕಾರ ಕೆಲಸ ಮಾಡುತ್ತಿದ್ದರು. ನಾನು ಮೊಟ್ಟ ಮೊದಲು ವಿಧಾನಸಭೆಗೆ ಆರಿಸಿಬಂದಾಗ ಶಾಸಕರ ದಿನಾಚರಣೆ ನಡೆದಾಗ ಅವರು ಕೀಚಕನ ಪಾತ್ರ ಹಾಕಿದ್ದರು. ನನಗೆ ಗೊತ್ತಾಗಲಿಲ್ಲ ಅವರು ಯಾರು ಎಂದು. ಅವರು ಒಳ್ಳೆಯ ಮಿಸೆಗೀಸೆ ಹಾಕಿಕೊಂಡು, ಇದ್ಯಾರಪ್ಪ ಆಗಡಿ ದೈತ್ಯ ಬಂದು ಬಿಟ್ಟಿದ್ದಾನೆ ಯಾರು ಎಂದು ನಾನು ಕೇಳಿದೆ. ಇಲ್ಲ ಇಲ್ಲ, ಅವರು ಯಾರೂ ಅಲ್ಲ ನಾಗರತ್ನಮ್ಮನವರು ಎಂದು ತಿಳಿಯಿತು. ಪ್ರತಿಯೊಂದರಲ್ಲಿಯೂ ಏನು ಮಾಡಿದರೂ ಒಳ್ಳೆಯ ಶಕ್ತಿಯುತವಾಗಿ ಕೆಲಸ ಮಾಡುವಂಥವರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹಾಗೂ ಅವರೇನು ಕಲಾಪರಿಷತ್ ಅಂತ ಏನು ಸ್ಥಾಪನೆ ಮಾಡಿದ್ದಾರೆ ಅದಕ್ಕೆ 95 ಲಕ್ಷ ಖರ್ಚುಮಾಡಿ ಅದಕ್ಕಾಗಿ ಕೊನೆ ಉಸಿರು

ಇರುವವರೆಗೆ ಕೆಲಸ ಮಾಡಿದ್ದಾರೆ. ಆದುದರಿಂದ ಅವರ ಹೆಸರು ಅದಕ್ಕೆ ಇಡಬೇಕು ಎಂದು ನಾನು ಸೂಚಿಸುತ್ತಿದ್ದೇನೆ. ಇನ್ನು ಕೆಲವು ಗಣ್ಯರ ಬಗ್ಗೆ ತಾವೇನು ಸೂಚಿಸಿದ್ದೀರಿ ಅವರುಗಳ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಹೇಳಿ ತಾವು ತಂದಂತಹ ಸಂತಾಪ ಸೂಚನೆಯನ್ನು ನಾನು ಅನುಮೋದಿಸುತ್ತಿದ್ದೇನೆ.

+ ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರುವ ಸಂತಾಪ ಸೂಚಕ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಅಗಲಿದ ಮಹನೀಯರುಗಳಿಗೆ, ಮಹಿಳೆಯರಿಗೆ ಶ್ರದ್ಧಾಂಜಲಿಯನ್ನು ನಾನು ಅರ್ಪಣೆ ಮಾಡುತ್ತಿದ್ದೇನೆ. ಮೊಟ್ಟ ಮೊದಲನೆಯದಾಗಿ, ಭೂಕಂಪದಿಂದ ಜೀವ ಕಳೆದುಕೊಂಡಿರುವ ಸಾವಿರಾರು ಮಂದಿಯ ಆತ್ಮಕ್ಕೆ ನಾವೆಲ್ಲರೂ ಶ್ರದ್ಧಾಂಜಲಿ ಅರ್ಪಿಸಬೇಕಾದ ಸಂದರ್ಭ ಇದು. ಎಂದೂ ಕೂಡ ಕಂಡರಿಯದ, ಕೇಳರಿಯದ ಈ ಒಂದು ಭೂಕಂಪದ ಪರಿಣಾಮ ಅಪಾರ. ಯಾರೂ ಕೂಡ ನಿರೀಕ್ಷೆ ಮಾಡಲಾರದ ಪರಿಸ್ಥಿತ ಉದ್ಭವವಾಯ್ತು. ಇಡೀ ಪ್ರಪಂಚದ ಗಮನವನ್ನೇ ಸೆಳೆದಿರುವ ಈ ಭೀಕರ ಭೂಕಂಪದ ಪರಿಣಾಮವನ್ನು ಇವತ್ತಿಗೂ ಕೂಡ ಜನ ನೆನೆಸಿದಾಗ ಅದೊಂದು ತತ್ತರಿಸುವಂತಹ ಒಂದು ಸಂದರ್ಭವೆಂದು ಹೇಳಬಹುದು. ಕರ್ನಾಟಕದ ಹೊರಗಡೆ ಅಂದರೆ ಮಹಾರಾಷ್ಟ್ರದಲ್ಲಿ ಭಾರಿ ಪ್ರಮಾಣದಲ್ಲಿ ಮತ್ತು ಕರ್ನಾಟಕದ ಒಳಭಾಗದ ಬಿಜಾಪುರ, ಬೀದರ್, ಗುಲ್ಬರ್ಗ- ಇತ್ಯಾದಿ ಕಡೆಗಳಲ್ಲಿ ಆಗಿರುವ ಪರಿಣಾಮ ಕೂಡ ನಮ್ಮ ಕರ್ನಾಟಕ ರಾಜ್ಯಕ್ಕೆ ಸೀಮಿತಗೊಳಿಸಿ ಹೇಳುವ ಹಾಗಿದ್ದರೆ ಅದೂ ಕೂಡ ಜಾಸ್ತಿ. ಆಸ್ತಿಪಾಸ್ತಿ ನಷ್ಟ ಜೊತೆಗೆ ಜೀವಗಳ ಹಾನಿ ಕೂಡ ಆಗಿದೆ. ಮಹಾರಾಷ್ಟ್ರದ್ದು ಅತ್ಯಂತ ಭೀಕರವಾಗಿರುವಂಥದ್ದು. ಈ ಸಂದರ್ಭದಲ್ಲಿ ನಾವು ಹೆಚ್ಚು ಅಂದರೆ ಅವರ ಆತ್ಮಕ್ಕೆ ಶಾಂತಿ ಕೋರುವಂತಹ ವಿಚಾರ ಬಿಟ್ಟರೆ ಬೇರೆ ಏನೂ ಉಳಿದಿಲ್ಲ.

ಇವತ್ತು ಈ ನಷ್ಟ ಅನುಭವಿಸುವ ಕುಟುಂಬಗಳಿಗೆ ಜೊತೆಗೆ ನಾವಿದ್ದೇವೆ ಅನ್ನುವುದನ್ನು ಕೆಲವು ಕಾರ್ಯಕ್ರಮಗಳನ್ನು ಹಾಕುವುದರ ಮೂಲಕ ಅವರಿಗೆ ಧೈರ್ಯವನ್ನು ನಾವು ತುಂಬಬೇಕಾಗುತ್ತದೆ. ಆ ಕರ್ತವ್ಯದಲ್ಲಿ ನಾವು ವಿಫಲರಾದರೆ ಆ ದುಃಖ ಇನ್ನೂ ಇಮ್ಮಡಿಯಾಗಿ ಹಲವು ಕಾಲದವರೆಗೆ ಉಳಿಯುವಂತಹ ಸಂದರ್ಭ ಆ ಕುಟುಂಬಗಳಿಗೆ ಹಾಗೂ ಆ ಒಂದು ಪ್ರದೇಶಕ್ಕೆ ಬರುತ್ತದೆ. ಇದನ್ನು ನಾವು ಆದಷ್ಟು ಕಡಿಮೆ ಮಾಡಿ ಆ ದುಃಖವನ್ನು ನೀಗತಕ್ಕಂತಹ ವಿಚಾರದಲ್ಲಿ ಉಳಿದಿರುವ ಜೀವಗಳ ಜೊತೆಯಲ್ಲಿ ನಿಮಗೆಲ್ಲ ಊರುಗೋಲಾಗಿ ನಾವು ನಿಂತಿದ್ದೇವೆ ಎನ್ನುವಂತಹ ಒಂದು ವಾತಾವರಣವನ್ನು ಸ್ಪಷ್ಟವಾಗಿ ನಾವು ನಿರ್ಮಾಣ ಮಾಡಬೇಕು. ಇದು ಅತ್ಯಂತ ಅಗತ್ಯವಾದ ವಿಚಾರ. ನೆರೆಹಾವಳಿಯಲ್ಲಿ ಕೂಡ ಅದೇ ರೀತಿಯ ಅನುಭವ ಆಗಿರುವುದನ್ನು ನಾವು ಅರಿತಿದ್ದೇವೆ. ಇದನ್ನು ರಾಯಚೂರು, ಧಾರವಾಡ ಇತ್ಯಾದಿ ಕಡೆ ನಾವು ನೋಡಿದ್ದೇವೆ. ಇನ್ನು ಶ್ರೀ ವೆಂಕಟಸುಬ್ಬಯ್ಯನವರು ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದರು. ತಾವೇ ಹೇಳಿದ ಹಾಗೆ, ಅವರು ಕೇಂದ್ರದಲ್ಲಿ ಸಚಿವರಾಗಿ ಕಾಂಗ್ರೆಸ್ ಪಕ್ಷದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿರುವಂಥರಾಗಿದ್ದರು. ಸಾರ್ವಜನಿಕ ಜೀವನದಲ್ಲಿ ಹಲವಾರು ಸ್ಥಾನಮಾನಗಳನ್ನು ಪಡೆದಿದ್ದಂಥ ಒಬ್ಬ ಮಹಾ ಮುತ್ಸದ್ದಿ ರಾಜಕಾರಣಿಯಾಗಿದ್ದ ಅವರೂ ಕೂಡ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬ ವರ್ಗದವರಿಗೆ ಈ ಒಂದು ದುಃಖವನ್ನು ತಡೆದುಕೊಳ್ಳತಕ್ಕಂತಹ ಶಕ್ತಿಯನ್ನು ದೇವರು ಕರುಣಿಸಲಿ ಎಂದು ನನು ಹಾರೈಸುತ್ತೇನೆ. ಇನ್ನು ಜೆ.ಆರ್.ಡಿ. ಟಾಟಾ ಅವರು ಪ್ರಮುಖ ವಾಣಿಜ್ಯೋದ್ಯಮಿ. ಅವರು ಹಲವಾರು ಕ್ಷೇತ್ರಗಳಲ್ಲಿ ನಮ್ಮದೇ ಆದ ವಿಶಿಷ್ಟ ಪಾತ್ರವನ್ನು ನಿರ್ವಹಣೆ ಮಾಡಿ ರಾಷ್ಟ್ರ ಮತ್ತು ಪ್ರಪಂಚಕ್ಕೆ ಅತ್ಯಂತ ದೊಡ್ಡ ಕೊಡುಗೆಯನ್ನು ಕೈಗಾರಿಕೋದ್ಯಮದಲ್ಲಿ ನೀಡಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಈ ಕೈಗಾರಿಕಾ ರಂಗದಲ್ಲಿ ತಮ್ಮದೇ ಆದಂತಹ ರೀತಿಯಲ್ಲಿ ಕೈಗಾರಿಕಾ ಬೆಳವಣಿಗೆಯನ್ನು ಮಾಡಿ ಈ ರಾಷ್ಟ್ರಕ್ಕೆ ತಮ್ಮದೇ ಆದಂತಹ ಕಾಣಿಕೆಯನ್ನು ಕೊಟ್ಟಿರತಕ್ಕಂತಹವರು ಮತ್ತು

ಸಾಧನೆ ಮಾಡಿರತಕ್ಕಂತಹವರಾಗಿದ್ದರು. ಅವರ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಹಾರೈಸುತ್ತೇನೆ. ಇನ್ನು ನಮಗೆ ಅತಿ ಹತ್ತಿರದಲ್ಲಿದ್ದು ನಮ್ಮನ್ನು ಆಗಲಿ ಹೋಗಿರತಕ್ಕಂತಹ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರ ಬಗ್ಗೆ ನಾನು ಮಾತನಾಡ ಬಯಸುತ್ತೇನೆ. ತಾವೇ ತಮ್ಮ ನಿರ್ಣಯದಲ್ಲಿ ಮಂಡನೆ ಮಾಡಿದ ಹಾಗೆ ನಾನು ಮುಖ್ಯಮಂತ್ರಿಯಾಗಿರತಕ್ಕಂತಹ ಕಾಲದಲ್ಲಿ ಅವರು ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ನಾನು ವಿಧಾನ ಸಭೆಯಲ್ಲಿ ಕಾಲಿಡುವುದಕ್ಕಿಂತ ಮುಂಚೆ ಅಂದರೆ 1967 ಕ್ಕಿಂತ ಮುಂಚೆ ಅವರು ವಿಧಾನ ಸಭಾ ಸದಸ್ಯರಾಗಿದ್ದಂತಹವರು. ಅತ್ಯಂತ ಹಿರಿಯ ಸದಸ್ಯರಾಗಿ ಸೇವೆ ಸಲ್ಲಿಸಿರತಕ್ಕಂತಹವರು. ನಮಗೆ ಅವರು ಮಾರ್ಗದರ್ಶಿಗಳಾಗಿದ್ದಂತಹವರು. ತಾವೇ ಹೇಳಿದ ಹಾಗೆ, ಈ ಸಭೆಯ ಅಧ್ಯಕ್ಷರಾಗಿ, ಸಚಿವರಾಗಿ ವಿರೋಧ ಪಕ್ಷದ ನಾಯಕರಾಗಿ ಸದಸ್ಯರಾಗಿ ಇಷ್ಟೇ ಅಲ್ಲದೆ, ಕಲಾ ಪ್ರಪಂಚಕ್ಕೆ ಅತ್ಯಂತ ನಿಕಟವರ್ತಿಗಳಾಗಿ ಸೇವೆ ಸಲ್ಲಿಸಿರತಕ್ಕಂತಹವರಾಗಿದ್ದಾರೆ. ಅಧಿಕಾರವಿರಲಿ, ಇಲ್ಲದಿರಲಿ, ತಮ್ಮದೇ ಆದಂತಹ ವಿಚಾರಧಾರೆಯನ್ನು ಪ್ರಾಮುಖ್ಯವಾಗಿ ಎರಡು ಕ್ಷೇತ್ರಗಳಿಗೆ ಸೀಮಿತಗೊಳಿ, ಮೀಸಲಿಟ್ಟು ಅದರಲ್ಲಿ ಮುಂದುವರಿಸತಕ್ಕಂತಹ ಶ್ರೇಷ್ಠ ರಾಜಕಾರಣಿಯಾಗಿದ್ದರು. ಅವರ ಆಗಲಿಕೆ ನಮಗೆ ಬಹಳ ನೋವುಂಟು ಮಾಡಿದೆ, ನಮಗೆ ಅದು ಚಿಕ್ಕದಲ್ಲ. ಏಕೆಂದರೆ, ನಮ್ಮನ್ನು ಅವರು ಬಹಳ ಪ್ರೀತಿಯಿಂದ ವಿಶ್ವಾಸದಿಂದ ಕಾಣುತ್ತಿದ್ದರು. ಆ ಪಕ್ಷ ಈ ಪಕ್ಷವೆಂದು ನೋಡದೆ ಎಲ್ಲರನ್ನೂ ಸಮಾನ ಭಾವನೆಯಿಂದ ಕಾಣುವಂತಹ ಉದಾತ್ತ ಭಾವನೆ ಅವರಲ್ಲಿತ್ತು. ಈ ಸಭೆಯಲ್ಲಿ ಎಲ್ಲರೂ ಸಮಾನ ಮನಸ್ಕರು ಎಂಬ ಸದ್ಭಾವನೆಯನ್ನು ಇಟ್ಟುಕೊಂಡು ಮುಂದುವರಿಯತಕ್ಕಂತಹವರಾಗಿದ್ದರು. ಅತ್ಯಂತ ಹೆಚ್ಚಿನ ಗೌರವವನ್ನು ಈ ಸದನದ ಎಲ್ಲಾ ಮೂಲೆಗಳಿಂದ ಪಡೆದುಕೊಂಡಿರತಕ್ಕಂತಹವರಾಗಿದ್ದರು. ಇಂತಹ ಸದ್ಭಾವನೆಯನ್ನು ಸಾರ್ವಜನಿಕ ಜೀವನದಲ್ಲಿ ಯಾರು ಇಟ್ಟುಕೊಂಡಿರುತ್ತಾರೆ, ಈ ದಿಶೆಯಲ್ಲಿ ಯಾರು ಹುಡುಕುತ್ತಾರೆ, ಯಾರು ಸಾಧನೆ ಮಾಡಿರುತ್ತಾರೆ, ಅಂತಹ ವ್ಯಕ್ತಿಗಳಲ್ಲಿ ಶ್ರೀಮತಿ ನಾಗರತ್ನಮ್ಮನವರು ಒಬ್ಬರು ಎನ್ನತಕ್ಕಂತಹ ವಿಚಾರವನ್ನು ಮತ್ತೊಮ್ಮೆ ಹೇಳಬಯಸುತ್ತೇನೆ. ಇನ್ನುಳಿದಿರತಕ್ಕಂತಹ ಮಹನೀಯರುಗಳ ಹೆಸರುಗಳ ಪಟ್ಟಿಯನ್ನು ತಾವೆಲ್ಲರೂ ಹೇಳಿದ್ದೀರಿ. ಶ್ರೀಮತಿ ನಾಗರತ್ನಮ್ಮನವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ತಡೆದುಕೊಳ್ಳತಕ್ಕಂತಹ ಶಕ್ತಿ ಸಿಗಲಿ ಎಂದು ಹಾರೈಸುತ್ತೇನೆ. ಅವರು ಬೆಂಗಳೂರಿನ ಸೌತ್ ಎಂಡ್ ಸರ್ಕಲ್‌ನ ಹತ್ತಿರ ಇರುವ ಆಸ್ಪತ್ರೆಯಲ್ಲಿ ಇದ್ದಾಗ ನಾನು ಹೋಗಿ ನೋಡಿ ಬಂದಿದ್ದೆ. ಅಲ್ಲಿ ಹೋಗಿದ್ದಾಗ ನಾನು ಗುಣಮುಖಳಾಗುತ್ತೇನೆ. ಏನೂ ತೊಂದರೆಯಿಲ್ಲವೆಂದು ಹೇಳಿದ್ದರು. ಆದರೆ ವಿಧಿಯ ಕೈವಾಡ, ತೀರ್ಪು ಬೇರೆಯೇ ಆಗಿತ್ತು. ಅದು ಏನೇ ಇರಲಿ, ಅವರು ನಮ್ಮನ್ನಗಲಿ ಹೋಗಿದ್ದಾರೆ. ಅವರ ಮತ್ತು ಇನ್ನಿತರ ಮಹನೀಯರುಗಳ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಈ ಸಂದರ್ಭದಲ್ಲಿ ಹಾರೈಸಿ, ನಾನೂ ಕೂಡ ಅಧ್ಯಕ್ಷರ ಜೊತೆಗೂಡಿ, ಈ ಸದನದ ಜೊತೆಗೂಡಿ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರತಕ್ಕಂತಹ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿತ್ತಾ, ಆಗಲಿದ ಎಲ್ಲಾ ಗಣ್ಯರಿಗೂ ಮೊದಲನೆಯದಾಗಿ ಶ್ರದ್ಧಾಂಜಲಿಯನ್ನರ್ಪಿಸುತ್ತಾ, ಶ್ರೀಮತಿ ನಾಗರತ್ನಮ್ಮನವರ ಬಗ್ಗೆ ಒಂದೆರಡು ಮಾತುಗಳನಾಡಬಯಸುತ್ತೇನೆ. ಅವರು ಅತ್ಯಂತ ಹಿರಿಯ ಶಾಸನ ಸಭಾ ಸದಸ್ಯರಾಗಿದ್ದರು. ಅದರಲ್ಲೂ ಮಹಿಳಾ ಶಾಸಕರಿಗಂತೂ ಅವರು ಅಮ್ಮ ಆಗಿದ್ದರು. ನಾವು ಅವರ ಹತ್ತಿರ ಮಾತನಾಡುವಾಗಲೆಲ್ಲಾ ಅಮ್ಮ ಹೇಗೆ ಇದ್ದೀರಿ ಎಂದು ಕೇಳುತ್ತಿದ್ದೆವು. ಹಲವಾರು ಸಂದರ್ಭದಲ್ಲಿ ಅವರು ಬಹಳವಾಗಿ ನಮ್ಮ ಕಷ್ಟಸುಖಗಳನ್ನು ವಿಚಾರ ಮಾಡುತ್ತಿದ್ದರು, ನಮ್ಮ ಕೆಲಸ ಕಾರ್ಯಗಳ ಬಗ್ಗೆ ಮಾತನಾಡುತ್ತಿದ್ದರು. ಆದರೆ ಇವತ್ತು ಅವರು ನಮ್ಮಿಂದ ದೂರವಾಗಿದ್ದಾರೆಂದರೆ ನಮಗೆ ನಂಬಲಿಕ್ಕೆ ಸಾಧ್ಯವಾಗಲಿಲ್ಲ ಮತ್ತು ಅಷ್ಟೇ ದುಃಖವಾಗುತ್ತಿದೆ. ಅಂತಹ ವ್ಯಕ್ತಿಯನ್ನು

ನಾವು ಈ ಶಾಸನ ಸಭೆಯಲ್ಲಿ ಕಾಣುತ್ತೇವೋ ಇಲ್ಲವೋ ಎನ್ನುವ ಭಾವನೆ ನನಗೆ ಉಂಟಾಗಿದೆ. ಶ್ರೀಮತಿ ನಾಗರತ್ನಮ್ಮ ಅವರು ಹಲವಾರು ಬಾರಿ ಇಲ್ಲಿಗೆ ಆರಿಸಿ ಬಂದಿದ್ದಾರೆ. ಆ ಕಾಲದಲ್ಲಿ ಶಾಸನ ಸಭೆಯ ಕಾರ್ಯಕಲಾಪಗಳು ಹೇಗೆ ನಡೆಯುತ್ತಿತ್ತು ಎಂಬುದರ ಬಗ್ಗೆ ಕೂಡ ಅವರು ಮಾತನಾಡುತ್ತಿದ್ದರು. ಆಗ ಎಷ್ಟು ಚೆನ್ನಾಗಿ ಸಭೆಯ ಕಾರ್ಯಕಲಾಪ ನಡೆಯುತ್ತಿತ್ತು ಶಾಸನ ಸಭಾ ಸದಸ್ಯರ ಪಾರ್ಟಿಸಿಪೇಷನ್ ಯಾವ ರೀತಿ ಇರುತ್ತಿತ್ತು ಎನ್ನುವುದರ ಬಗ್ಗೆ ಕೇಳುತ್ತಿದ್ದರು. ಅವರು ಸದಸ್ಯರಾಗಿ ಬಂದಾಗ ಐ.ಎ.ಎಸ್. ಅಧಿಕಾರಿಗಳ ಜೊತೆ ಸುಮಾರು 6 ತಿಂಗಳ ತರಬೇತಿ ಕೊಡುತ್ತಿದ್ದರಂತೆ. ಶ್ರೀ ಎಸ್. ಕೃಷ್ಣ ಅವರು ಸಭಾಧ್ಯಕ್ಷರಾಗಿದ್ದಾಗ ಇದೇ ರೀತಿಯ ತರಬೇತಿಯನ್ನು ಕೊಡಿಸಿದರು. ಆದರೆ ಆಗ ಹೆಚ್ಚು ಜನ ಅದರಲ್ಲಿ ಭಾಗವಹಿಸಲಿಲ್ಲವೆಂದು ಕೂಡ ಹೇಳುತ್ತಿದ್ದರು. ಐ.ಎ.ಎಸ್. ಅಧಿಕಾರಿಗಳ ಜೊತೆಯಲ್ಲಿ ತರಬೇತಿ ಕೊಡುತ್ತಿದ್ದರೆ ಶಾಸನ ಸಭೆಯ ಕಾರ್ಯಕಲಾಪದಲ್ಲಿ ಹೇಗೆ ಭಾಗವಹಿಸಬೇಕು, ನಮ್ಮಲ್ಲಿ ಆಡಳಿತ ಹೇಗೆ ಇರಬೇಕೆಂಬ ಉತ್ತಮ ನೀತಿ ನಡವಳಿಕೆಗಳನ್ನು ಇದರಿಂದ ನಾವು ಕಲಿಯಬಹುದಿತ್ತು, ಇದರಿಂದಾಗಿ ನಾವು ಆಡಳಿತದಲ್ಲಿ ಕ್ರಿಯಾತ್ಮಕವಾಗಿ ಹೇಗೆ ಭಾಗವಹಿಸಬೇಕೆಂದು ತಿಳಿಯಿತು ಎಂದು ಹೇಳುತ್ತಿದ್ದರು. ನಿಜವಾಗಿಯೂ ಅವರ ಬಗ್ಗೆ ನನಗೆ ಹೆಮ್ಮೆ ಎಂದು ಹೇಳಿದರೆ ಒಬ್ಬ ಧೀಮಂತ ಮಹಿಳೆಯಾಗಿ ಪ್ರಥಮಬಾರಿಗೆ ಮಹಿಳಾ ಸಭಾಧ್ಯಕ್ಷಿಣಿಯಾಗಿ, ವಿರೋಧಪಕ್ಷದ ನಾಯಕಿಯಾಗಿ ಅವರು ಯಾವ ಪುರುಷ ಶಾಸಕರಿಗೂ ಕಡಿಮೆ ಇಲ್ಲ, ಸ್ತ್ರೀಯರಿಗೂ ಅವಕಾಶವನ್ನು ಕೊಟ್ಟರೆ ಎಂಥ ಕೆಲಸವನ್ನೂ ಕೂಡ ನಾವು ಸಾಧನೆ ಮಾಡಿ ತೋರಿಸಬಲ್ಲೆವು ಎನ್ನತಕ್ಕಂಥದ್ದನ್ನು ಅವರು ಇವತ್ತು ಬಹಳ ಒಳ್ಳೆಯ ರೀತಿಯಲ್ಲಿ ಮಾಡಿ ಎಲ್ಲರಿಗೂ ಕೂಡ ಆದರ್ಶಪ್ರಾಯರಾಗಿದ್ದಾರೆ. ಆ ಒಂದು ಆದರ್ಶ ನಮ್ಮ ಎಲ್ಲ ಮಹಿಳೆಯರಿಗೂ ಬರಬೇಕು. ನಾವುಗಳು ಕೂಡ ಅವರ ಆದರ್ಶವನ್ನು ಇಟ್ಟುಕೊಂಡು ಶಾಸನಸಭಾ ಸದಸ್ಯರಾಗಿ ಕೆಲಸವನ್ನು ಮಾಡೋಣ ಎನ್ನತಕ್ಕಂಥ ಮಾತನ್ನು ನಮ್ಮ ಮಹಿಳಾ ಶಾಸಕರಿಗೆ ಹೇಳುತ್ತಾ ಅವರ ಆದರ್ಶ ನಮ್ಮಲ್ಲಿ ಉಳಿಯಲಿ, ನಾವುಗಳು ಕೂಡ ಅವರಷ್ಟೇ ಧೈರ್ಯಶಾಲಿಗಳಾಗಿ ಕೆಲಸವನ್ನು ಮಾಡುವಂಥ ಪ್ರವೃತ್ತಿಯನ್ನು ಬೆಳೆಸಿಕೊಳ್ಳೋಣ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಅವರು ಏನು ಚಿತ್ರಕಲಾ ಪರಿಷತ್ತನ್ನು ಪ್ರಾರಂಭಮಾಡಿದ್ದಾರೆ, ಅದರ ಬೆಳವಣಿಗೆಗೆ ಮತ್ತು ಅವರ ಹೆಸರನ್ನು ಉಳಿಸುವುದಕ್ಕೆ ನಾವು ಸಹಾ ಚಿತ್ರಕಲಾ ಪರಿಷತ್ತಿಗೆ ಸಾಕಷ್ಟು ಕೆಲಸವನ್ನು ಮಾಡೋಣ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ, ನನಗೆ ಈ ಎರಡು ಮಾತುಗಳನ್ನಾಡಲು ಅವಕಾಶವನ್ನು ಕೊಟ್ಟಂಥ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಸನ್ಮಾನ್ಯ ಸಭಾಧ್ಯಕ್ಷರೇ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನನ್ನ ಸಂಪೂರ್ಣ ಸಹಮತವನ್ನು ವ್ಯಕ್ತಮಾಡುತ್ತಾ, ಸೆಪ್ಟೆಂಬರ್ 30 ರಂದು ನಡೆದ ಭೂಕಂಪ ಬಹುಶಃ ರಾಷ್ಟ್ರದ ಜನಜೀವನದಲ್ಲಿಯೇ ಅತ್ಯಂತ ಭೀಕರವಾದಂಥ ಒಂದು ಘಟನೆ. ಹಾಗೆಯೇ ಅಷ್ಟೇ ಭೀಕರವಾಗಿ ಅಲ್ಪಸ್ವಲ್ಪ ಸರಿಸುಮಾರು ಅದಕ್ಕೆ ಸಮಾನದಂಥ ನೆರೆ ಹಾವಳಿ ಕೂಡ ಈ ರಾಜ್ಯದಲ್ಲಿ ಆಯಿತು. ಸುಮಾರು ಇಪ್ಪತ್ತು ಸಾವಿರ ಮನೆಗಳು ಬಿದ್ದುಹೋದವು ಎನ್ನತಕ್ಕಂಥದ್ದನ್ನು ಪತ್ರಿಕಾ ವರದಿಗಳ ಮೂಲಕ ನೋಡಿದ್ದೇವೆ. ಹಲವಾರು ಕುಟುಂಬಗಳು ತಮ್ಮ ಹಿರಿಯರನ್ನು, ಮಕ್ಕಳುಗಳನ್ನು ಕಳೆದುಕೊಂಡಿದ್ದಾರೆ. ನೆರೆಹಾವಳಿ ಮೂಲಕ ಮಡಿದಂಥ ಕುಟುಂಬಗಳ ಬಗ್ಗೆ ಕೂಡ ತಮ್ಮ ಸಂತಾಪಸೂಚನೆಯಲ್ಲಿ ಸೇರಿಸಬೇಕು ಎಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಇಲ್ಲಿ ಅನೇಕ ಜನ ಗಣ್ಯರ ಬಗ್ಗೆ ಪ್ರಸ್ತಾಪ ನಡೆದಿದೆ. ಶ್ರೀಮತಿ ನಾಗರತ್ನಮ್ಮನವರು ಅನೇಕ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಮೊದಲನೆಯ ದಾಖಲೆ ಎಂದರೆ ಶಾಸನಸಭೆಯಲ್ಲಿ ಇಷ್ಟು ದೀರ್ಘಕಾಲ ಕೆಲಸ ಮಾಡಿರತಕ್ಕಂಥ ಮತ್ತೊಬ್ಬ ಸದಸ್ಯರನ್ನು ಗುರುತಿಸುವುದಕ್ಕೆ ಆಗದೇ ಇರುವಂಥ ಕೆಲಸ.

ಅವರು ಕರ್ನಾಟಕ ವಿಧಾನಸಭೆಯ ಮೊದಲನೆಯ ಮಹಿಳಾ ಅಧ್ಯಕ್ಷರಾಗಿ ಸಮರ್ಥವಾಗಿ ಕೆಲಸವನ್ನು ಮಾಡಿದ್ದಾರೆ ಮುಂದೆ ಯಾರು ಬರುತ್ತಾರೊ ಗೊತ್ತಿಲ್ಲ. ಹಾಗೆಯೇ ಮೊದಲನೆ ಮಹಿಳಾ ವಿರೋಧ ಪಕ್ಷದ ನಾಯಕಿಯಾಗಿಯೂ ದಾಖಲೆಯನ್ನು ಬಿಟ್ಟುಹೋಗಿದ್ದಾರೆ. ಶ್ರೀಮತಿ ನಾಗರತ್ನಮ್ಮನವರನ್ನು ನಾನು ಹತ್ತಿರದಿಂದ ಬಲ್ಲವನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಕಠಿಣವಾದಂಥ ಪರಿಶ್ರಮ, ಸಾಮಾನ್ಯ ಜ್ಞಾನ, ಆಳವಾದ ಅನುಭವ ಈ ಮೂರನ್ನು ಮೇಳೈಸಿದಂಥ ಒಂದು ವ್ಯಕ್ತಿತ್ವ. ಹಾಗೆಯೇ ಜನರ ವಿಚಾರಗಳು ಕಷ್ಟ ಸುಖಗಳ ಪ್ರಶ್ನೆ ಬಂದಾಗ ಯಾವ ಪರೀಕ್ಷೆಗೂ ತನ್ನನ್ನು ತಾನೇ ಒಳಪಡಿಸಿಕೊಳ್ಳುವಂಥ ಒಂದು ಪ್ರಸಂಗ. ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಒಂದು ಸಾರಿ ಏನಾಯಿತು ಎನ್ನುವುದು ನನಗೆ ನೆನಪಾಗುತ್ತದೆ, ಶ್ರೀಮಾನ್ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದರು. ಶ್ರೀಮತಿ ನಾಗರತ್ನಮ್ಮನವರು ಅವರ ಶರ್ಟನ್ನು ಎಳೆದಂಥ ಒಂದು ಪ್ರಸಂಗ. ಯಾವ ಗಂಡಸು ಕೂಡ ಮಾಡಲಾರದಂಥ ಕೆಲಸ. ವಿಷಯ ಬಹಳ ಚಿಕ್ಕದು. ನನ್ನ ಕ್ಷೇತ್ರಕ್ಕೆ ಒಂದು ಕೆರೆ ಆಗಲಿಲ್ಲ, ಅದಕ್ಕೆ ಬೇಕಾದಂಥ ಪೂರಕವಾದಂಥ ಸಿದ್ಧತೆಯನ್ನು ಸಂಬಂಧಪಟ್ಟ ಇಂಜಿನಿಯರ್ ಮಾಡಲಿಲ್ಲ ಎನ್ನತಕ್ಕಂಥದ್ದು.

ಅಷ್ಟೇ ಸಮರ್ಥವಾದಂತಹ ಉತ್ತರ ಶ್ರೀಮಾನ್ ದೇವರಾಜ್ ಅರಸ್ ಅವರಿಂದ. ಆಗ ಅವರು ಉತ್ತರ ಕೊಡಲಿಲ್ಲ, ಶರಟು ಹಿಡಿದರು ಎಂದು ಕೋಪ ಮಾಡಿಕೊಳ್ಳಲಿಲ್ಲ, ಬೆಳಿಗ್ಗೆ ಉಪಹಾರಕ್ಕೆ ಕರೆದಿದ್ದರು, ನನ್ನನ್ನೂ ಕರೆದಿದ್ದರು. ವಿಷಯ ಏನೆಂದು ತಿಳಿದುಕೊಂಡು ಆ ಎರಡೂ ಕೆಲಸ ಮಾಡಿ ಉಪಹಾರಕ್ಕೆ ಕರೆದಿದ್ದರು. ಶ್ರೀಮತಿ ನಾಗರತ್ನಮ್ಮನವರಿಗೆ ಎಷ್ಟು ಕೋಪ ಇತ್ತೋ ಗೊತ್ತಿಲ್ಲ, ಆದರೆ ಬೆಳಿಗ್ಗೆ ಕ್ಷಮೆ ಕೇಳಿದರು. ನನಗೆ ನಾನು ಏನೂ ಕೇಳಲಿಲ್ಲ, ನನ್ನ ಕ್ಷೇತ್ರಕ್ಕೆ ಒಂದು ಕೆರೆ ಕೇಳಿದೆ ಮಾಡಲಿಲ್ಲ ಎಂದರು. ಇಲ್ಲ, ಮೂರು ತಿಂಗಳಾಗಿದೆ ಆಜ್ಞೆ ಮಾಡಿ ಎಂದು ದೇವರಾಜ್ ಅರಸ್ ಹೇಳಿದರು. ಆದರೆ ಆಜ್ಞೆ ಆವತ್ತು ಆಯಿತು. ಹೀಗೆ ಜನರ ಬಗ್ಗೆ, ಅವರ ಆಗುಹೋಗುಗಳ ಬಗ್ಗೆ ತೀವ್ರವಾದಂತಹ ಕಳಕಳಿಯನ್ನು ಇಟ್ಟುಕೊಂಡಿದ್ದಂತಹವರು. ಜೊತೆಯಲ್ಲಿ ತುಂಬಾ ಸ್ನೇಹಮಯಿ ಆಗಿದ್ದರು. ಮತ್ತು ಒಂದು ಆಗರ್ಭ ಶ್ರೀಮಂತ ಕುಟುಂಬದಿಂದ ಬಂದಿದ್ದಂತಹವರು ಎಂದು ಹೇಳುವುದಕ್ಕೆ ಅವರು ಹಾಕುತ್ತಿದ್ದ ವೇಷ ಭೂಷಣಗಳೇ ಸಾಕ್ಷಿ. ಬದುಕಿರುವವರೆಗೆ ಅದನ್ನು ಅವರು ಪಾಲಿಸಿಕೊಂಡು ಬಂದರು. ಬರೇ ವೇಷ ಭೂಷಣಗಳಲ್ಲಿ ಅಷ್ಟೇ ಅಲ್ಲ, ತನ್ನ ಜೀವನದ ಉದ್ದಕ್ಕೂ ಇಂತಹ ಶ್ರೀಮಂತಿಕೆಯ ಪ್ರದರ್ಶನವನ್ನು ಸದಾ ಮಾಡುತ್ತಿದ್ದರು. ನಮ್ಮ ನೆನಪಿನಲ್ಲಿ ಸದಾ ಉಳಿಯತಕ್ಕಂಥ ಧೀಮಂತ ವ್ಯಕ್ತಿತ್ವ ಅವರದ್ದು. ಅವರ ಆಗಲಿಕೆ ನಿಜಕ್ಕೂ ಕರ್ನಾಟಕ ರಾಜ್ಯಕ್ಕೆ, ಶಾಸನಸಭೆಗೆ ತುಂಬಲಾರದ ನಷ್ಟ ಎಂದು ನಾನು ಭಾವನೆ ಮಾಡಿಕೊಳ್ಳುತ್ತೇನೆ. ಇನ್ನು ಶ್ರೀಮಾನ್ ವೆಂಕಟಸುಬ್ಬಯವರ ಜೊತೆಗೆ ಕೆಲಸ ಮಾಡತಕ್ಕ ಒಂದು ಅವಕಾಶ ನನಗೆ ಸಂಸತ್‌ನಲ್ಲಿ ದೊರಕಿತ್ತು. ಅವರು ಬಹಳ ಹೆಚ್ಚಾಗಿ ನಮ್ಮ ಜೊತೆಯಲ್ಲಿ ಕನ್ನಡದಲ್ಲಿ ಮಾತನಾಡುತ್ತಿದ್ದರು. ಅವರೂ ಒಬ್ಬ ಕನ್ನಡಿಗರೇ. ಅವರು ನಮ್ಮ ರಾಜ್ಯದ ರಾಜ್ಯಪಾಲರಾಗಷ್ಟೇ ಇರಲಿಲ್ಲ, ಕೆಲವು ದಿವಸಗಳ ಕಾಲ ಕರ್ನಾಟಕ ರಾಜ್ಯದ ಆಡಳಿತದ ಜವಾಬ್ದಾರಿಯನ್ನು ಶ್ರೀಮಾನ್ ವೆಂಕಟಸುಬ್ಬಯ್ಯನವರು ವಹಿಸಿಕೊಂಡು ರಾಷ್ಟ್ರಪತಿ ಆಡಳಿತದಲ್ಲಿ ಇಲ್ಲಿಂದ ರಾಜ್ಯಭಾರವನ್ನು ನಡೆಸಿದವರು.

ಇನ್ನು ಶ್ರೀಮಾನ್ ಕೃಷ್ಣಮೂರ್ತಿಯವರು ತೀರಾ ಹತ್ತಿರದ ಸಂಬಂಧಿಕರು ಮೇಲ್ಮನೆ ಸದಸ್ಯರಾಗಿ, ಒಂದು ದೃಷ್ಟಿಯಿಂದ ಆಕಸ್ಮಿಕವಾಗಿ ರಾಜಕೀಯವನ್ನು ಪ್ರವೇಶ ಮಾಡಿದವರು. ಆದರೆ ಅದು ಆಕಸ್ಮಿಕ ಎನ್ನುವುದಕ್ಕೆ ಅವಕಾಶ ಕೊಡದೆ ತನ್ನ ಅಧಿಕಾರದ ಅವಧಿಯಲ್ಲಿ ಜನ ಹಿತ ಕಾರ್ಯವನ್ನು, ಜನಪರವಾದ ಸೇವೆಯನ್ನು ಮಾಡಿ ಅಕಾಲಿಕ ಮರಣಕ್ಕೆ ತುತ್ತಾಗಿದ್ದು ಒಂದು ದುರಂತ. ಅವರ ಮತ್ತು ಇನ್ನಿತರ ಹಿರಿಯರ ಬಗ್ಗೆ ತಾವು ತಮ್ಮ ಸಂತಾಪ ಸೂಚನೆಯಲ್ಲಿ ಸೂಚಿಸಿರತಕ್ಕಂಥ ಶ್ರೀಮಾನ್ ಜೆ.ಆರ್.ಡಿ

ಟಾಟಾ ಅವರಿಗೆ ನನ್ನ ಸಂತಾಪವನ್ನು ವ್ಯಕ್ತ ಮಾಡುತ್ತೇನೆ. ಹಾಗೆಯೇ ಕನ್ನಡ ನಾಡು ಮತ್ತು ನುಡಿಗೆ ಅಗ್ರಹಣ್ಯ ಸೇವೆ ಸಲ್ಲಿಸಿರುವವರಲ್ಲಿ ಶಾಶ್ವತವಾಗಿ ಉಳಿಯತಕ್ಕಂಥ ಹೆಸರು ಶ್ರೀಮಾನ್ ಜಿ.ಬಿ. ಜೋಷಿ ಅವರದ್ದು. ಧಾರವಾಡದಿಂದ ಅವರ ಪ್ರಕಾಶನ ಸಂಸ್ಥೆ ಮೂಲಕ ಕನ್ನಡಕ್ಕೆ ಅಚ್ಚಳಿಯದ ಸೇವೆ ಸಲ್ಲಿಸಿದ್ದಾರೆ. ಕನಿಷ್ಟ ಕನ್ನಡ ನಾಡಿನ ಪ್ರಾತಿನಿಧಿಕ ಸಭೆಯಲ್ಲಿ ಇಂತಹವರನ್ನು ನೆನೆಸಿಕೊಳ್ಳುವುದು ನಮ್ಮಗಳ ಕರ್ತವ್ಯ. ಕರ್ತವ್ಯದ ದೃಷ್ಟಿಯಿಂದ ಹೇಳುತ್ತೇನೆ, ಅನೇಕ ಸಾರಿ ಶಾಸನಸಭೆಯಲ್ಲಿ ಸದಸ್ಯರಾಗಿಲ್ಲದವರ ಬಗ್ಗೆಯೂ ಪ್ರಸ್ತಾಪ ಮಾಡಿದ್ದೇವೆ. ಇವತ್ತು ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ, ಶ್ರೀ ಜಿ.ಕೆ. ವೆಂಕಟೇಶ್‌ರವರು ಇರಬಹುದು, ಕನ್ನಡ ಸಿನಿಮಾ ರಂಗಕ್ಕೆ ಸೇವೆ ಸಲ್ಲಿಸಿದ ಶ್ರೀಮಾನ್ ಸುಂದರಕೃಷ್ಣ ಅರಸ್ ಅವರು ಇರಬಹುದು. ಇಂತಹ ಅನೇಕರ ಸೇವೆಯನ್ನು ಸ್ಮರಿಸುವುದರಲ್ಲಿ ನನ್ನ ದೃಷ್ಟಿಯಲ್ಲಿ ಅಪಚಾರ ಆಗುವುದಿಲ್ಲ. ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ ಕನ್ನಡ ನೆಲಕ್ಕಾಗಿ ದುಡಿದವರನ್ನು ನೆನೆಸಿಕೊಳ್ಳತಕ್ಕದ್ದು ಈ ಸಭೆಯ ಒಂದು ಆದ್ಯ ಕರ್ತವ್ಯ. ಆ ದೃಷ್ಟಿಯಿಂದ ತಾವು ನೆರೆ ಹಾವಳಿಯಿಂದ ನೊಂದಂತಹವರು, ಶ್ರೀಮಾನ್ ಜಿ.ಬಿ. ಜೋಷಿ ಅವರು, ಶ್ರೀಮಾನ್ ಜಿ.ಕೆ. ವೆಂಕಟೇಶ್, ಅವರು, ಶ್ರೀಮಾನ್ ಸುಂದರಕೃಷ್ಣ ಅರಸ್ ಅವರುಗಳ ಹೆಸರನ್ನು ಈ ಸಂತಾಪ ಸೂಚನಾ ನಿರ್ಣಯದಲ್ಲಿ ಸೇರಿಸಿ ಈ ಸಂತಾಪ ಸೂಚನಾ ನಿರ್ಣಯವನ್ನು ಪೂರ್ಣಗೊಳಿಸಬೇಕು ಎಂದು ಹೇಳುತ್ತಾ ನನಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಮತ್ತು ನನ್ನ ಸಹಮತವನ್ನು ಅಭಿವ್ಯಕ್ತ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

+ Sri B.I. Patil (Uchgaon) : Mr. Speaker Sir, it pains me very much to make a reference to the sad demise of Sri N.O. Samaji who was a Member of the Mysore Representative Assembly in 1957 and 1962. He was the first MES candidate who got elected to Bombay State in 1956. He was a great popular mass leader, caretaker of farmers, labourers and downtrodden people. He was respected, liked and loved by one and all for his ever-smiling nature. He was a great thinker and was associated with several religious, educational, social and co-operative activities. He fought for inlcusion of Belgaum and other border areas in Maharashtra till he breathed last.

It also pains me to make a reference to the sad demise of Smt. K.S. Nagarathnamma who served in various capacities for the Congress Party and in Government.

We also would like to convey our heart felt condolences to members of the bereaved families who lost their lives in the recent earthquakes in Maharashtra and Karnataka as well as Shri J.R.D. Tata, great Industrialist. Sir, on behalf of Maharashtra Ekikaran Samiti, we pray Almighty that the departed souls may rest in eternal peace.

12.00 P M

ಅಧ್ಯಕ್ಷರು : ಮಾನ್ಯ ಸದಸ್ಯರುಗಳಾದ ಪಿ.ಜಿ.ಆರ್. ಸಿಂಧ್ಯರವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮತ್ತು ಮಾನ್ಯ ಚಂದ್ರೇಗೌಡರು ಪತ್ರಕರ್ತರ ಹೆಸರುಗಳನ್ನು ಮತ್ತು ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದಂತಹ ವ್ಯಕ್ತಿಗಳ ಹೆಸರುಗಳನ್ನೂ ಸಹಿತ ಇದರಲ್ಲಿ

ಅಳವಡಿಸುವಂಥ ವ್ಯವಸ್ಥೆ ಆಗಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದರಂತೆ ಮೃತರ ಕುಟುಂಬವರ್ಗದವರೆಲ್ಲರಿಗೂ ನಮ್ಮೆಲ್ಲರ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ನಿಧನ ಹೊಂದಿದವರ ಮೃತರ ಆತ್ಮಕ್ಕೆ ಶಾಂತಿಯನ್ನು ಕೊಡಲು ಮಾನ್ಯ ಸದಸ್ಯರು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು ಎದ್ದುನಿಂತು ಮೃತರ ಸ್ಮರಣಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ವರ್ಷದಲ್ಲಿ ನೂರು ದಿನಗಳ ಕಾಲ ಸಭೆಯನ್ನು ನಡೆಸುವುದು

ಅಧ್ಯಕ್ಷರು : ಇನ್ನು ಇವತ್ತು ಬೆಳಿಗ್ಗೆ ಸಾಕಷ್ಟು ಮಾನ್ಯ ಸದಸ್ಯರುಗಳು ಬಂದು ನನಗೆ ಭೇಟಿಯಾಗಿ ನಾಳೆ ದಿವಸದ ಕಾರ್ಯಕಲಾಪದ ಬಗ್ಗೆ ರಜೆಯನ್ನು ಕೊಟ್ಟು ಪುನಃ ಸೋಮವಾರ ಕೂಡೋಣವೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ, ಇಲ್ಲ, ನಾವು ಯಾರೂ ಅದಕ್ಕೆ ಒಪ್ಪಿಲ್ಲ. ಬಹಳ ಮುಖ್ಯವಾದ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಯಾವ ಕಾರಣಕ್ಕೂ ಸಭೆಯನ್ನು ಮುಂದೂಡಬಾರದು. ಸಭೆಯನ್ನು ಶನಿವಾರ ಸಹ ನಡೆಸಬೇಕೆಂದು ಹೇಳುವವರು ನಾವು.

ಶ್ರೀ ಕೆ.ಎಸ್. ಈಶ್ವರಪ್ಪ : ಸಭೆಯನ್ನು ಈಗ ಕರೆದಿರುವುದು 12 ದಿವಸಕ್ಕೆ ದಯವಿಟ್ಟು ಸಭೆ ನಡೆಯಲಿಕ್ಕೆ ಅವಕಾಶ ಮಾಡಿಕೊಡಬೇಕು. ಇಡೀ ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಎಲ್ಲ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಬೇಕೇ ಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾದ ಮೇಲೆ ವಿಧಾನ ಸಭೆಯಲ್ಲಿ ಹೊಸ ಸಂಪ್ರದಾಯವನ್ನು ಹಾಕುತ್ತೇವೆಂದು ಹೇಳಿದ್ದರು. ಅದೇನೆಂದರೆ, ವರ್ಷದಲ್ಲಿ ಕನಿಷ್ಟ ಒಂದು ನೂರು ದಿವಸಗಳ ಕಾಲ ಈ ಸಭೆಯ ನಡವಳಿಕೆಯನ್ನು ನಡೆಸುತ್ತೇವೆನ್ನತಕ್ಕ ಆಶ್ವಾಸನೆಯನ್ನು ಸದನದಲ್ಲಿಯೂ ಕೊಟ್ಟಿದ್ದಾರೆ, ಹೊರಗಡೆಯೂ ಕೊಟ್ಟಿದ್ದಾರೆ. ಆದರೆ ಈ ವರ್ಷದಲ್ಲಿ ಲೆಕ್ಕಹಾಕಿದರೆ 40-45 ದಿವಸ ಸಭೆ ನಡೆದಿರಬಹುದು. 12 ದಿವಸಗಳ ಸಭೆಯನ್ನು ಇವತ್ತಿನ ದಿವಸ ಕರೆದಿದ್ದಾರೆ. ಅದರಲ್ಲಿ ಈಗಾಗಲೇ ಒಂದು ದಿವಸವನ್ನು ಮೋಟಕು ಮಾಡಬೇಕೆಂದರೆ ಸಭೆ ಕರೆಯುವುದೇ ಬೇಡ. ಸಭೆ ಕರೆಯುವ ಅವಶ್ಯಕತೆ ಏನಿದೆ? ಸರ್ಕಾರ ಬಹಳ ಸುಭದ್ರವಾಗಿದೆ, ಭದ್ರವಾಗಿದೆ, ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ಕೇಳಿದ್ದನ್ನೆಲ್ಲ ಕೊಡುತ್ತಿದ್ದಾರೆ. ರಾಜ್ಯದಲ್ಲಿ ಸಮೃದ್ಧಿ ಅನ್ನುವುದು ತುಂಬಿ ತುಳುಕಾಡುತ್ತಿದೆ. ಹಣದ ಹೊಳೆ ಇವತ್ತಿನ ದಿವಸ ಹರಿಯುತ್ತಿದೆ. ಇವರ ಆಡಳಿತ ಬಹಳ ದಕ್ಷವಾಗಿದೆ. ಆದ್ದರಿಂದ ವಿಧಾನ ಸಭೆಯನ್ನು ಕರೆದು ಇವತ್ತಿನ ದಿವಸ ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ, ಅವರು ಆಡಳಿತವನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಆದ್ದರಿಂದ ಸಭೆಯನ್ನು ಕರೆಯುವುದೇ ಬೇಡ, ಅದರ ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವತ್ತು ಡಿಸೆಂಬರ್ 30ನೇ ತಾರೀಖು, ನಾವು ಸಭೆ ಸೇರುತ್ತಿದ್ದೇವೆ. ಸಾಮಾನ್ಯವಾಗಿ ಈ ಸಭೆ ಜನವರಿ ಮೊದಲನೆಯವಾರ ಜಂಟಿ ಅಧಿವೇಶನ ಸೇರಬೇಕಾಗಿತ್ತು. ಇದು ಒಂದು ಹಳೆಯ ಸಂಪ್ರದಾಯವಾಗಿದೆ. ಯಾವುದೋ ಒಂದು ಓಬಿರಾಯನ ಕಾಲದ ಹಳೆಯ ಕಾಲದ